ಹೊರನಾಡ ಚಿಲುಮೆ

ಕಾಂಗರುನಾಡಿನ ಕನ್ನಡಿಗರಿಂದ ವಿಶ್ವ ಕನ್ನಡಿಗರ ಹೃದಯಕ್ಕೆ

ಆಸ್ಟ್ರೇಲಿಯಾದ ಮೊಟ್ಟಮೊದಲ ಕನ್ನಡ ಇ-ಮಾಸಪತ್ರಿಕೆ

Chilume Circulated in and around 10 countries

ಸಂಪುಟ ೪, ಸಂಚಿಕೆ ೧, ಜೂನ್ ೨೦೧೬

ಕನ್ನಡದಲ್ಲಿ ನಾಲ್ಕ ಮಾತಾಡಿ

ವರ್ಷದ ಹಾದಿಯಲ್ಲಿ ನಿಮ್ಮ ಚಿಲುಮೆ

Find us on: facebook

ಹೊರನಾಡ ಚಿಲುಮೆ ಇ-ಮಾಸ ಪತ್ರಿಕೆಯ ಓದುಗರಿಗೆಂದು ತೆರೆಯಲಾಗಿರುವ ಫೇಸ್ಬುಕ್ ಗುಂಪು ಸೇರಿಕೊಳ್ಳಲು ಕೆಳಗಿನ ಲಿಂಕ್ ಕ್ಲಿಕ್ ಮಾಡಿ

JOIN CHILUME FACEBOOK GROUP (You have to be logged in to facebook to join)

ಚಿಲುಮೆಯ ಒಳಗೆ

ಸಂಪಾದಕೀಯ ... ಪು. ೧

ಸಿಡ್ನಿ ಸುದ್ದಿಗಳು ... ಪು. ೨

ಚಿಲುಮೆಯ ಒಳಗೆ

ಸೋಮೇಶ್ವರ ಶತಕ ... ಪು. ೩

ರಾಂ ರಾಮ ... ಪು. ೮

ಚಿಲುಮೆಯ ಒಳಗೆ

ಕಥಾಚಿಲುಮೆ, ರೆಸಿಪಿ ... ಪು. ೧೨

ಕಾವ್ಯ ಚಿಲುಮೆ, ಹಾಸ್ಯ ಚಿಲುಮೆ ... ಪು. ೧೩

ಚಿಲುಮೆಯ ಒಳಗೆ

ಪದಪುಂಜ/ರಂಗೋಲಿ ... ಪು. ೧೪

ಶಾಯರಿ ... ಪು. ೧೫

ಚಿಲುಮೆಯ ಒಳಗೆ

ದೆವ್ವತ್ತಿ ಮರ (ಅನುಭವ) ... ಪು. ೧೬

ವಿಜ್ಞಾನ , ಅಲ್ಲಲ್ಲಿ ಏನೇನು ... ಪು. ೨೦

ನಾಗಶ್ಯೆಲ ಕುಮಾರ್ ಅವರ ಅನುಭವ ಕಥನ - ದೆವ್ವತ್ತಿ ಮರ ಭಾಗ – ೧ - ಪುಟ ೧೬

ಸಂಪಾದಕೀಯ

ಬದರಿ ತ್ಯಾಮಗೊಂಡ್ಲು

ಹೊರನಾಡ ಚೆಲುಮೆಯ ನಾಲ್ಕನೆಯ ವರ್ಷದ ಮೊದಲ ಸಂಚಿಕೆಯಿದು. ಸತತ ಮೂರು ವರ್ಷದಿಂದ ಓದುಗರಾಗಿ ನೀವು ತೋರುತ್ತಿರುವ ಪ್ರೀತ್ಯಾದಾರಗಳಿಗೆ ಸಂಪಾದಕ ಮಂಡಳಿಯು ನಿಮಗೆ ಹೃತ್ಪೂರ್ವಕ ಕೃತಜ್ಞತೆಯನ್ನರ್ಪಿಸುತ್ತದೆ. ನಿಮ್ಮ ಓದಿಗೆಂದು ಶ್ರಮವಹಿಸಿ, ವಿವಿಧ ಅಭಿರುಚಿಯವರೆಲ್ಲರಿಗೂ ಒಪ್ಪುವಂತಹ ಬರಹಗಳನ್ನು ಸಿದ್ಧಪಡಿಸಿ ಕೊಡುತ್ತಿರುವ ಲೇಖಕರೆಲ್ಲರಿಗೂ ಅನೇಕ ಧನ್ಯವಾದಗಳನ್ನು ಸಂಪಾದಕೀಯ ಸಮಿತಿಯು ಅರ್ಪಿಸುತ್ತದೆ.

ಒಂದು ಪುಟ್ಟ ಯೋಚನೆಯಿಂದ ಶುರುವಾದ ಈ ಮಾಸಪತ್ರಿಕೆಯನ್ನು ಮೂರುವರ್ಷಗಳ ಕಾಲ ನಡೆಸಿಕೊಂಡು ಬಂದಿದ್ದೀರಿ. ಇದಕ್ಕಿಂತ ಹೆಚ್ಚಿನ ಕೃತಾರ್ಥತೆಯನ್ನು ಬಯಸಲಾಗುವುದಿಲ್ಲ. ಬರುವ ದಿನಗಳಲ್ಲೂ ನಿಮ್ಮ ಸಹಯೋಗ, ಸಹಕಾರವಿರಲಿ.

ಕನ್ನಡದ ಬಗ್ಗೆ ಅನೇಕ ಕೆಲಸಗಳಲ್ಲಲ್ಲಿ ನಡೆಯುತ್ತಿರುತ್ತದೆ. ಸಣ್ಣಪುಟ್ಟ ಆಚರಣೆಗಳಿರಬಹುದು, ಅಥವಾ ಬಹುದೊಡ್ಡ ವಿಚಾರ ಗೋಷ್ಠಿಯೇ ಇರಬಹುದು. ನಡೆಯುವುದು ಹೆಚ್ಚಲ್ಲ. ಆದರೆ ಅದರಿಂದ ನಾವುಗಳು ಏನು ಪಡೆದುಕೊಳ್ಳುತ್ತೀವಿ ಅಥವಾ ಅದಕ್ಕೆ ನಾವೇನು ಕೊಡುಗೆ ಕೊಡುತ್ತೀವಿ ಎನ್ನುವುದು ಮುಖ್ಯ. ಎಲ್ಲರಿಗೂ ಎಲ್ಲ ಕಡೆಯೂ ಹೋಗಿ ಭಾಗವಹಿಸಿವ ಅನುಕೂಲ ಅವಕಾಶಗಳು ಇರದೇ ಇರಬಹುದು. ಹಾಗೆಂದು ಸುಮ್ಮನೇ ಕುಳಿತುಕೊಳ್ಳಬೇಕಿಲ್ಲ. ಇದೊಂದು ತರಹ, ‘‘ನಾವು ಗಣೇಶನ ಹಬ್ಬದ ದಿನವೇ ಗಣೇಶನ ಪೂಜೆ ಮಾಡಬೇಕೆ’’ ಎಂದು ಪ್ರಶ್ನಿಸಿಕೊಂಡಂತೆ. ನಿಜ, ಆಯಾ ದಿನಗಳ ವೈಶಿಷ್ಟ್ಯಗಳನ್ನು ಆಯಾ ದಿನಗಳೇ ಆಚರಿಸಿದರೆ, ಅದರ ಸೊಬಗು ಹೆಚ್ಚು. ಹಾಗೆಂದು ದಿನನಿತ್ಯ ನಮಗಾಗುವ ರೀತಿಯಲ್ಲಿ ಗಣೇಶನನ್ನು ಪೂಜಿಸಿದರೆ ಆಗುವುದಿಲ್ಲವೇ? ಭಾಷೆಯೂ ಒಂದು ದೇವಪೂಜೆ ಇದ್ದಂತೆಯೆಂದು ಭಾವಿಸಲು ಅಡ್ಡಿಯಿಲ್ಲವಷ್ಟೇ! ಭಾಷೆಯು ಒಂದು ಸ್ವರೂಪವಾಗಿ ಕಾಣುವುದಿಲ್ಲವಲ್ಲವೇ. ಆದರೆ ಬಳಕೆಯಿಂದ ಅದನ್ನು ಅರಿಯಬಹುದು. ಅರಿತಷ್ಟೂ ಅದರ ಸೌಂದರ್ಯವು ಲಹರಿಯಾಗಿ ಹರಿಯುತ್ತದೆ. ಭಾಷೆಯ ಬಗ್ಗೆ ಬರೆಯುತ್ತ ಹೋದರೆ ಕೊನೆಮೊದಲಿಲ್ಲ. ನಮ್ಮ ಕಳಕಳಿಯಿಷ್ಟೇ. ನಾವು ಮೊದಲು ಭಾಷೆಯನ್ನು ಉಪಯೋಗಿಸುತ್ತಾ ಸಾಗಬೇಕು. ನಮ್ಮ ಸುತ್ತಮುತ್ತಲಿನವರು ಅದರ ಸೊಗಡನ್ನರಿತು ತಿಳಿದುಕೊಳ್ಳಲು ಬರುತ್ತಾರೆ. ನಾವೇ ಭಾಷೆಯ ಬಳಕೆಯಲ್ಲಿ ಹಿಂದುಳಿದರೆ, ಪೂಜೆಯಿಲ್ಲದ ದೇವಸ್ಥಾನದಂತಾಗುತ್ತದೆಯೆ ಹೊರತು, ವೈಭವದಿಂದ ನಡೆಯುವ ನಿತ್ಯಪೂಜಾದೇಗುಲವಾಗದು.

ನಾವು ನೀವುಗಳೆಲ್ಲ ಭಾಷೆಯ ಸಹಸ್ರನಾಮಗಳನ್ನು ಉಚ್ಚರಿಸದಿದ್ದರೂ, ದಿನನಿತ್ಯದಲ್ಲಿ, ಸಭೆ ಸಮಾರಂಭಗಳಲ್ಲಿ, ತಿಳಿದವರ ಜೊತೆಯಲ್ಲಿ ನಾಲ್ಕು ಮಾತುಗಳನ್ನು ಕನ್ನಡದಲ್ಲಿ ಆಡಿದರೂ, ಕನ್ನಡದೊಲವು ಚೆಲುಮೆಯಾಗಿ ನಮ್ಮಲ್ಲಿ ಸ್ಫುರಿಸುತ್ತದೆ. ಚೆಲುಮೆಯನ್ನೋದುವ ನೀವುಗಳೆಲ್ಲರೂ ಭಾಷಾಭಿಮಾನಿಗಳೆಂಬುದರಲ್ಲಿ ಸಂಶಯವಿಲ್ಲ. ನಿಮ್ಮಲ್ಲಿರುವಂತೆಯೇ, ನಿಮ್ಮ ಸುತ್ತಮುತ್ತಲಿನಲ್ಲೂ ಕನ್ನಡ ಧ್ವನಿಯು ಮೊಳಗಲಿ ಎಂಬ ಹಿರಿದಾಸೆ ಚೆಲುಮೆಯ ಸಂಪಾದಕೀಯ ಮಂಡಳಿಯದ್ದು. ಕನ್ನಡದ ಧ್ವನಿಯು ಎಲ್ಲೆಡೆಯು ನಿಮ್ಮಿಂದ ಮೊಳಗುತ್ತಿರಲಿ. ▪

ಎರಡು ತಿಂಗಳ ಪ್ರಮುಖ ದಿನಗಳು

ಜೂನ್ ಶ್ರೀ ದುರ್ಮುಖಿ ನಾಮ ಸಂವತ್ಸರ,
ಉತ್ತರಾಯಣ/ದಕ್ಷಿಣಾಯಣ, ವಸಂತ/ಗ್ರೀಷ್ಮ ಋತು, ವೈಶಾಖ/ಜ್ಯೇಷ್ಠ ಮಾಸ

01 ಬು - ಅಪರಾ ಏಕಾದಶಿ
4/5 ಬಾದಾಮಿ ಅಮಾವಾಸ್ಯೆ
06 ಸೋ - ಜ್ಯೇಷ್ಠ ಮಾಸ ಆರಂಭ
07 ಮಂ - ರಂಜಾನ್ ಉಪವಾಸ ಆರಂಭ
16 ಗು - ನಿರ್ಜಲ ಏಕಾದಶಿ
20 ಸೋ - ಕಾರ ಹುಣ್ಣಿಮೆ, ವಟ ಸಾವಿತ್ರಿ ವ್ರತ
23 ಗು - ಸಂಕಷ್ಟ ಚತುರ್ಥಿ
30 ಗು – ಯೋಗಿನಿ ಏಕಾದಶಿ

ಜುಲೈ ಶ್ರೀ ದುರ್ಮುಖಿ ನಾಮ ಸಂವತ್ಸರ, ದಕ್ಷಿಣಾಯಣ,
ಗ್ರೀಷ್ಮ ಋತು, ಜ್ಯೇಷ್ಠ/ಆಷಾಢ ಮಾಸ

04 ಸೋ - ಮಣ್ಣೆತ್ತಿನ ಅಮಾವಾಸ್ಯೆ
05 ಮಂ - ಆಷಾಢ ಮಾಸ ಆರಂಭ
06 ಬು - ಕುತುಬ್ ಎ ರಂಜಾನ್
10 ಭಾ – ಸ್ಕಂದ ಷಷ್ಠಿ
15 ಶು - ಯೋಗಿನೀ ಏಕಾದಶಿ
16 ಶ – ದಕ್ಷಿಣಾಯನ ಪುಣ್ಯಕಾಲ ಆರಂಭ
18 ಸೋ – ಸ್ವಾಮಿ ವಿವೇಕಾನಂದ ಪುಣ್ಯದಿನ
19 ಮಂ – ವ್ಯಾಸ/ಗುರು ಹುಣ್ಣಿಮೆ
23 ಶ - ಸಂಕಷ್ಟ ಚತುರ್ಥಿ
24 ಭಾ - ಬಾಲ ಗಂಗಾಧರ ತಿಲಕ್ ಜನ್ಮ ದಿನ
30 ಶ - ಕಾಮಿಕಾ ಏಕಾದಶಿ

'ಭವಿಕ' ಸಿಡ್ನಿಯ ಸಂಗೀತ ಸಂಜೆ

ವೀಣಾ ಸುದರ್ಶನ್

'ಭವಿಕ' ಸಿಡ್ನಿ, ಮೇ 28ರಂದು ಒಂದು ಸುಂದರ ಸಂಗೀತ ಸಂಜೆಯನ್ನು ಏರ್ಪಡಿಸಿತ್ತು. ಈ ಕಾರ್ಯಕ್ರಮವನ್ನು ಶ್ರೀಮತಿ ಅಪರ್ಣನಾಗಶಯನ ಅವರ ತಂದೆ ಹಾಗು ಗುರು, ದಿವಂಗತ ಪಂಡಿತ ದತ್ತಾತ್ರೇಯ ಸದಾಶಿವ ಗರುಡರಿಗೆ ಸಮರ್ಪಿಸುವುದರ ಮೂಲಕ ಅಂದಿನ ಹಣ ಸಂಗ್ರಹವನ್ನು 'SEWA International' ನ ಒಂದು ಯೋಜನೆಗೆ ನೀಡಲಾಯಿತು. ಈ ಹಿಂದೆ ಸಹ' ಭವಿಕ' ಇಂತಹುದೇ ಸಂಗೀತ ಕಾರ್ಯಕ್ರಮದಿಂದ ಬಂದ ಹಣವನ್ನು 'Sebastian Foundation'ಗೆ ನೀಡಿತ್ತು .

ಕನ್ನಡ ವೃತ್ತಿ ರಂಗಭೂಮಿ ಖ್ಯಾತಿಯ ಗರುಡ ಸದಾಶಿವರಾಯರ ರಂಗಪರಂಪರೆ ಮತ್ತು ಪಂಡಿತ ದತ್ತಾತ್ರೇಯ ಸದಾಶಿವ ಗರುಡರ ಸಂಗೀತ, ಇವೆರಡೂ ಕನ್ನಡಕ್ಕೆ ಸಂದಿರುವ ಅಮೂಲ್ಯ ಕೊಡುಗೆಗಳು. ಇಂತಹ ಕಲಾವಂತ ತಲೆಮಾರಿನ ಹಿನ್ನೆಲೆಯುಳ್ಳ ಅಪರ್ಣ, ನಮ್ಮ ಸಮುದಾಯದ ಚಿರಪರಿಚಿತ ಗಾಯಕಿ. ಸಿಡ್ನಿಯಲ್ಲಿ ಸುಮಾರು 20ವರ್ಷದಿಂದ 'ಭವಿಕ' ಅನ್ನುವ ಸಂಗೀತ ಶಾಲೆ ನಡೆಸುತ್ತಾ ತಬಲ, ಕೀಬೋರ್ಡ್, ಹಾರ್ಮೋನಿಯಮ್ ಮತ್ತು ಹಾಡನ್ನು ಕಲಿಸುತಿದ್ದಾರೆ.

ಸಂಗೀತಕ್ಕೆ ಒಂದು ಮಾಂತ್ರಿಕ ಗುಣವಿರುವುದು ಹೌದು. ಒಂದಲ್ಲಾ ಒಂದು ರೀತಿಯಲ್ಲಿ ನಮ್ಮನ್ನು ಪ್ರಭಾವಿಸುತ್ತದೆ. ಹಲವರಿಗೆ ಹಲವು ಬಗೆಯಲ್ಲಿ ಅದು ಅಂತರಂಗವನ್ನು ತಟ್ಟಿ ಎಬ್ಬಿಸಿದರೆ, ಕೆಲವರಿಗೆ ಸುತ್ತಲಿನ ಎಲ್ಲವನ್ನೂ ಮರೆತು ಒಂದು ಕ್ಷಣ ತಲ್ಲೀನರಾಗುವಂತೆ ಮಾಡುತ್ತದೆ. ಅಂಥಾ ಒಂದು ಮಧುರ ಮೋಡಿಯ ಅನುಭವ ಮೊನ್ನೆ ಅಪರ್ಣ ಅವರ ಸಂಗೀತ ಸಂಜೆಯಲ್ಲಿತ್ತು.

ಅಪರ್ಣ ಅವರು ತಮ್ಮ ತಂದೆಯವರೇ ರಚಿಸಿ ಸಂಯೋಜಿಸಿದ 'ದರಸನ ಬಿನ ಜಿಯರಾ ತರಸೆ' ಮತ್ತು 'ಮೋಹಿ ಲಾಗಿ ಲಗನ ಗುರು' ಎನ್ನುವ ಮೀರಾ ಭಜನೆಯನ್ನು ಅಭೋಗಿ ಕಾನಡ ರಾಗದಲ್ಲಿ ಪ್ರಸ್ತುತಪಡಿಸಿದರು. ನಂತರ ಹಾಡಿದ ಜನಪ್ರಿಯ ಗಝಲ್ ಗಳು ಮತ್ತು ಮರಾಠಿ ಅಭಂಗ್ ಗಳು ನಮ್ಮನ್ನು 90ರ ದಶಕದ ನೆನಪಿನಾಳಕ್ಕೆ ಕರೆದೊಯ್ದರೆ, ಮಿಶ್ರ ಮಾಂಡ್ ರಾಗದಲ್ಲಿ ಹಾಡಿದ ಅಕ್ಕಮಹಾದೇವಿಯ ವಚನ 'ಕೇಳವ್ವ ಕೇಳವ್ವ ಕೆಳದಿ' ಜಾನಪದದ ಲವಲವಿಕೆಯಿಂದ ಕೂಡಿತ್ತು. ತಮ್ಮದೇ ಸಂಗೀತ ಸಂಯೋಜನೆಯ, ರಾಗೆಶ್ರೀ ರಾಗದಲ್ಲಿ ಹಾಡಿದ ಕನಕದಾಸರ 'ನಾನು ನೀನು ಎನ್ನದಿರೋ' ಕೃತಿಯ ವಿಸ್ತಾರವಾದ ಪ್ರಸ್ತುತಿ ಕನ್ನಡಿಗರಿಗೆ ಸಹಜವಾಗಿಯೇ ಪ್ರಿಯವಾಯಿತು. ಶ್ರೀಮತಿ ವೇದಾವತಿ ಗೋಪಾಲಸ್ವಾಮಿಯವರ ಸಂಯೋಜನೆಯ, ಬರುವ ರಾಗ ಮತ್ತು ಪ್ರತೀಕ್ಷಾ ರಾಗಗಳ ಸೂಫಿ ಸಂತರ ಕೀರ್ತನೆಗಳು ತುಂಬಾ ಅಪರೂಪದ ಪ್ರಸ್ತುತಿಗಳು. ಅದರಲ್ಲೂ ಪ್ರತೀಕ್ಷಾ ರಾಗದ 'ರೇನ್ ಗವಾಯಿ ಸೋಯಿ' ಬಹಳಕಾಲ ಮನಸ್ಸಿನಲ್ಲುಳಿಯುವಂತಾ ಸಂಯೋಜನೆ ಎನ್ನಬೇಕು. ಶ್ರೀ ಎಮಾಲ್ ಓರ್ಯ ಅವರ ಹಾರ್ಮೋನಿಯಂ , ಶ್ರೀ ಮಹರ್ಷಿ ರಾವಲ್ ಅವರ ತಬಲಾ ಮತ್ತು ಗಾರ್ಗಿ ಬೆಳ್ಳಾವೆಯ ಚಂದದ ನಿರೂಪಣೆ ಅಂದಿನ ಸಂಗೀತಕ್ಕೆ ಇನ್ನಷ್ಟು ಮೆರಗು ತಂದಿತು.

ಕಲಾವಿದರಿಗೆ ತಮ್ಮ ಕಲೆಯ ಅಭಿವ್ಯಕ್ತಿಯಲ್ಲಿ ಅಸಾಧಾರಣ ವಿಶ್ವಾಸ ಇರಬೇಕಾಗುತ್ತದೆ. ಒಂದು ಗುರುತರವಾದ ಸಾಧನೆಗೆ ತಮ್ಮ ಬದುಕನ್ನೆ ಸಮರ್ಪಿಸಿಕೊಳ್ಳಬೇಕಾಗುತ್ತದೆ. ಹಾಗೆ ಸಂಗೀತವೆ ತಮ್ಮ ಜೀವಾಳ ಎಂಬಂತೆ ಬದುಕಿದ ದ. ಸ. ಗರುಡರ ಪ್ರಭಾವ ಅಪರ್ಣ ಅವರಲ್ಲೂ ನಿಚ್ಚಳವಾಗಿ ತೋರುತ್ತಿದೆ . ಅಧ್ಯಯನ ಮತ್ತು ಅಧ್ಯಾಪನ ಎನ್ನುವ ಅವರ ತಂದೆಯ ಹಿತನುಡಿಯ ಹೆಜ್ಜೆಯಲ್ಲಿ ಸಾಗುತ್ತಿರುವ ಅಪರ್ಣ ನಮಗೆ ಹೀಗೆ ಇನ್ನಷ್ಟು ಸುಂದರ ಸಂಗೀತ ಸಂಜೆಗಳನ್ನು ನೀಡುತ್ತಿರಲಿ. ▪

ಪರಿಚಯ – ಕವಿ ಕಾಲ ನಿರ್ಣಯ

ಕೆಲವಂ ಬಲ್ಲವರಿಂದೆ ಕಲ್ತು ಕೆಲವಂ ಶಾಸ್ರಂಗಳಂ ಕೇಳುತಂ |
ಕೆಲವಂ ಮಾಳ್ಪವರಿಂದ ಕಂಡು, ಕೆಲವಂ ಸುಜ್ಞಾನದಿಂ ನೋಡುತಂ ||
ಕೆಲವಂ ಸಜ್ಜನ ಸಂಗದಿಂದಲರಿಯಲ್ ಸರ್ವಜ್ಞನಪ್ಪಂ ನರಂ |
ಪಲವುಂ ಪಳ್ಳ ಸಮುದ್ರವೈ ಹರಹರಾ ಶ್ರೀ ಚನ್ನ ಸೋಮೇಶ್ವರಾ ||

ಈ ಮೇಲಿನ ಸಾಲುಗಳನ್ನು ಕೇಳದಿರುವ ಕನ್ನಡಿಗರು ವಿರಳ. ಇದರಂತೆಯೇ "**ಚರಿಪಾರಣ್ಯದ ಪಕ್ಷಿಗೊಂದು ತರು ಗೊಡ್ಡಾಗಲ್ --- ಧರೆಯೊಳ್ ದಾತರು ಪುಟ್ಟರೇ?**", "**ರವಿಯಾಕಾಶಕೆ ಭೂಷಣಂ --- ಕವಿಯಾಸ್ಥಾನಕೆ ಭೂಷಣಂ**" , "**ಪೋರಬೇಡಂಗಡಿ ಸಾಲ --- ತೆರಬೇಡೊತ್ತೆಗೆ ಬಡ್ಡಿಯಂ**" ಮುಂತಾದ ಪದ್ಯಗಳೂ ಅನೇಕರಿಗೆ ಪರಿಚಿತವೇ. ಇವೆಲ್ಲವೂ ಸೋಮೇಶ್ವರ ಶತಕದಲ್ಲಿನ ಚರಣಗಳು.

ಸೋಮೇಶ್ವರ ಶತಕದಲ್ಲಿ ಪ್ರಾರಂಭದ ಈಶಸ್ತವನ ಮತ್ತು ಕೊನೆಯ ಭರತವಾಕ್ಯಗಳಲ್ಲದೆ, ಒಟ್ಟು 108 ಚರಣಗಳಿವೆ. ಪ್ರತಿಯೊಂದು ಚರಣವೂ ನಾಲ್ಕು ಸಾಲಿನ ಮತ್ತೇಭವಿಕ್ರೀಡಿತ ವೃತ್ತದಲ್ಲಿ ರಚಿತವಾಗಿವೆ.

ಮೇಲೆ ಉದ್ಧರಿಸಿದ ಚರಣವು, ಈ ಶತಕದ ಮೊದಲನೆಯ ವೃತ್ತ, (ಆರಂಭದ ಶಿವಸ್ತುತಿಯನಂತರ). ಇದು ಕಾವ್ಯದ ಮುಖ್ಯ ಉದ್ದೇಶ – **ಜ್ಞಾನವನ್ನು ಸಂಪಾದಿಸುವ ಬಗೆ ಹೇಗೆ** ಎಂದು ವಿವರಿಸುತ್ತದೆ. ಇದಾದ ನಂತರದ ಎರಡನೆಯ ಚರಣದ ಮೊದಲ ಸಾಲುಗಳು

ಆದರಿಂ ನೀತಿಯೆ ಸಾಧನಂ ಸಕಲ ಲೋಕಕ್ಕಾಗಬೇಕೆಂದು ಪೇ-
ಳಿದ ಸೋಮಂ ಸುಜನರ್ಕಳೀ ಶತಕದೊಳ್ ತಪ್ಪಿರ್ದೊದಂ ತಿದ್ದಿ ತೋ-
ರ್ಪುದು ---

ಈತನ ಹೆಸರು ಸೋಮನೆಂದು ಮಾತ್ರವಲ್ಲ ಆತನ ವಿನಯ ಮತ್ತು ನಮ್ರತೆಗಳನ್ನೂ ಸೂಚಿಸುತ್ತದೆ.
ಈ 108 ಚರಣಗಳಾದ ನಂತರ ಕೃತಿಯ ಕೊನೆಯಲ್ಲಿರುವ **ಭರತವಾಕ್ಯದಲ್ಲಿ** ಹೀಗೆ ಹೇಳಿದ್ದಾನೆ:

ಸ್ವಾಮೀ ನನ್ನಿಂದ ನೀನಿಂತೊರೆಯಿಸಿದೆ ಕೃಪಾದೃಷ್ಟಿಯಂ ಬೀರಿ ಲೋಕ |
ಪ್ರೇಮ ತಾಳ್ದಿಂತು ನೀತಿಪ್ರಕಟನೆ ಪಡೆ ನಾಲ್ಸಾಸಿರಂ ನಾಲ್ಕುನೂರಂ ||
ಈ ಮಾಯಾಪೂರ್ಣಕಲ್ಯಬ್ದದೆ ಗತಿಸೆ ವಿಕಾರ್ಯಬ್ದದಲ್ಲೀಶ್ವರಾ ನಿ-
ನ್ನಾ ಮಾಹಾತ್ಮ್ಯಂಪ್ರಿಗಿತ್ತೆ ಪುಲಿಗಿರಿ ನಗರೀ ಶಾಸನಾಂಕಾ ಮಹೇಶಾ ||

ಈ ಅಂತಿಮ ಚರಣದ ಪ್ರಕಾರ ಕಲಿಯುಗ ಕಳೆದು 4400 ವರ್ಷಗಳ ಬಳಿಕ ವಿಕಾರಿ ಸಂವತ್ಸರದಲ್ಲಿ ಕವಿಯು ಈ ಕೃತಿಯನ್ನು ರಚಿಸಿದನೆಂದೂ, ಅವನ ಊರು ಪುಲಿಗೆರೆಯೆಂದೂ ವಿದಿತವಾಗುತ್ತದೆ. ಕಲಿಯುಗ 3102 BCE ಯಲ್ಲಿ ಪ್ರಾರಂಭವಾಯಿತು. ಎಂದರೆ ಗ್ರಂಥ ರಚನೆಯ ವರ್ಷ CE 1298 ಅಥವಾ 1299. ಆದರೆ ವಿಕಾರಿ ಸಂವತ್ಸರವು ಬಂದದ್ದು 1299 ರಲ್ಲಿ. ಆದ್ದರಿಂದ ಇದೇ ಸರಿಯಾದ ವರ್ಷ.

ಈ ಗ್ರಂಥದಲ್ಲಿನ ಉದಾಹರಣೆಗಳು ಮುಖ್ಯವಾಗಿ ರಾಮಾಯಣ, ಮಹಾಭಾರತ, ಭಾಗವತ ಮತ್ತು ಪುರಾಣಗಳ ಕಥೆಗಳನ್ನು ಆಧರಿಸಿವೆ. ಅಲ್ಲದೆ "ಹವಿ ಯಜ್ಞಾಳಿಗೆ ಭೂಷಣಂ", "ಶ್ರುತಿಮಾರ್ಗಂ ಬಿಡದಾತ ಸುವ್ರತಿ" "ದ್ವಿಜನಾಚಾರತೆಯುಳ್ಳವಂ". "ಘೃತಮಿಲ್ಲದೂಟ" ಮುಂತಾದ ಹೇಳಿಕೆಗಳೂ, ವೇದಗಳಿಗೆ ಪ್ರಾಶಸ್ತ್ಯವೂ ಇವೆ. ಈ ಎಲ್ಲ ಕಾರಣಗಳಿಂದ ಹಲವು ವಿದ್ವಾಂಸರು ಕವಿಯು ವೈದಿಕ ಬ್ರಾಹ್ಮಣನೆಂದು ನಿರ್ಧರಿಸಿದ್ದಾರೆ.

ಒಟ್ಟಿನಲ್ಲಿ ಸಂಗ್ರಹಿಸಿ ಹೇಳಬೇಕಾದರೆ ಸೋಮೇಶ್ವರ ಶತಕವನ್ನು ರಚಿಸಿದವನು ಸೋಮ ಎಂಬುವ ಬ್ರಾಹ್ಮಣ ಶಿವಭಕ್ತ. ಇವನ ಊರು ಪುಲಿಗೆರೆ. ಈತನ ಕಾಲ ಕ್ರಿ.ಶ. ಹದಿಮೂರು ಮತ್ತು ಹದಿನಾಲ್ಕನೆಯ ಶತಮಾನಗಳು.

ಮುಂದಿನ ಪುಟ ನೋಡಿ ...

ಶತಕದ ಕೆಲವು ಉದಾಹರಣೆಗಳು

ಸೋಮೇಶ್ವರ ಶತಕದಲ್ಲಿನ ವೃತ್ತಗಳ ಒಂದು ವಿಶೇಷವೆಂದರೆ ಯಾವ ವಿಷಯವನ್ನಾದರೂ ಅನೇಕ ಉದಾಹರಣೆಗಳಿಂದ ವಿಸ್ತಾರವಾಗಿ ಪುಷ್ಟೀಕರಿಸುವುದು, ಸ್ಪಷ್ಟ ಮಾಡುವುದು. ಇಂತಹ ವಿಸ್ತಾವಾದ ವಿವರಣೆ ಸಂಸ್ಕೃತದ ಸುಭಾಷಿತಗಳಲ್ಲಾಗಲಿ, ಸರ್ವಜ್ಞನ ತ್ರಿಪದಿಗಳಲ್ಲಾಗಲಿ ಸಾಮಾನ್ಯವಾಗಿ ಕಂಡು ಬರುವುದಿಲ್ಲ. ಉದಾಹರಣೆಗೆ "ಕೆಲವಂ ಬಲ್ಲವರಿಂದ ಕಲ್ತು ---" ಎಂಬ ಅಭಿಪ್ರಾಯವನ್ನೂ ಸಂಸ್ಕೃತದ ಒಂದು ಸುಭಾಷಿತ ಸ್ಥೂಲವಾಗಿ ಹೇಳುತ್ತದೆ.

ಆಚಾರ್ಯಾತ್ ಪಾದಮಾದತ್ತೇ ಪಾದಂ ಶಿಷ್ಯ ಸ್ವಮೇಧಯಾ
ಪಾದಂ ಸಬ್ರಹ್ಮಚಾರಿಭ್ಯಃ ಪಾದಂ ಕಾಲಕ್ರಮೇಣ ತು ||

"ಶಿಷ್ಯನು ತನ್ನ ವಿದ್ಯೆಯ ಕಾಲು ಭಾಗವನ್ನು ಗುರುವಿನಿಂದಲೂ. ತನ್ನ ಸ್ವಂತ ಬುದ್ಧಿ ಶಕ್ತಿಯಿಂದ ಕಾಲು ಭಾಗವನ್ನೂ, ಸಹಪಾಠಿಗಳಿಂದ ಇನ್ನೊಂದು ಕಾಲು ಭಾಗವನ್ನೂ ಮತ್ತು ಕಾಲಕ್ರಮೇಣ (ಎಂದರೆ ಅನುಭವದಿಂದ) ಉಳಿದ ಕಾಲು ಭಾಗವನ್ನೂ ಪಡೆಯುತ್ತಾನೆ."

1. ಎಂಥ ಕಷ್ಟ ಸ್ಥಿತಿಯಲ್ಲಿರುವರೆಗೂ ಮುಂದೆ ಒಳ್ಳೆಯದಾಗಬಹುದು ಎಂಬ ಆಶಾ ಭಾವವನ್ನು ಈ ವೃತ್ತ ಸೂಚಿಸುತ್ತದೆ.

ಉಡುರಾಜಂ ಕಳೆಗುಂದಿ ಪೆರ್ಚದಿಹನೇ ? ನ್ಯಗ್ರೋಧ ಬೀಜಂ ಕೆಲಂ-
ಸಿಡಿದುಂ ಪೆರ್ಮರನಾಗದೇ ? ಎಳೆಗರೇನೆತ್ತಾಗದೇ ಲೋಕದೋಳ್ ?
ಮಿಡಿ ಪಣ್ಣಾಗದೇ ? ದೈವದೊಲ್ಮೆಯಿರೆ ತಾಂ ಕಾಲಾನುಕಾಲಕ್ಕೆ ಕೇಳ್
ಬಡವಂ ಬಲ್ಲಿದನಾಗನೇ ? ಹರಹರಾ ಶ್ರೀ ಚನ್ನ ಸೋಮೇಶ್ವರಾ

"ಅಮಾವಾಸ್ಯೆಯ ದಿನ ಸಂಪೂರ್ಣ ಮರೆಯಾದ ಚಂದ್ರ ಮತ್ತೆ ಬೆಳಗುವನು; ಆಲದ ಮರದ ಚಿಕ್ಕ ಬೀಜ ಒಡೆದು ದೊಡ್ಡ ಮರವಾಗುವುದು; ಎಳೆಗರು ಬೆಳೆದು ಎತ್ತಾಗುವುದು; ಹಸಿಕಾಯಿ ಹಣ್ಣಾಗುವುದು; ಇದೇ ರೀತಿ ದೈವದ ಒಲವಿದ್ದರೆ ಬಡವನೂ ಶ್ರೀಮಂತನಾಗುವನು."

2. ಉತ್ತಮ ಮನುಷ್ಯರ ಲಕ್ಷಣಗಳು ಏನು? ಯಾವುದನ್ನು ಮಾಡಿದರೆ ಒಳಿತಾಗುತ್ತದೆ? ಎಂತಹವರು ಗೌರವಾರ್ಹರು? ಮುಂತಾದ ಪ್ರಶ್ನೆಗಳನ್ನು ಈ ಸಾಲುಗಳು ಉತ್ತರಿಸುತ್ತವೆ.

ಹಿತವಂ ತೋರುವನಾತ್ಮಬಂಧು, ಪೊರೆವಾತಂ ತಂದೆ, ಸದ್ಧರ್ಮದಾ
ಸತಿಯೇ ಸರ್ವಕೆ ಸಾಧನಂ, ಕಲಿಸಿದಾತಂ ವರ್ಣಮಾತ್ರಂ ಗುರು ||
ಶ್ರುತಿಮಾರ್ಗಂ ಬಿಡದಾತ ಸುವ್ರತಿ, ಮಹಾಸದ್ವಿದ್ಯೆಯೇ ಪುಣ್ಯದಂ |
ಸುತನೇ ಸದ್ಗತಿದಾತನೈ ಹರಹರಾ ಶ್ರೀ ಚನ್ನ ಸೋಮೇಶ್ವರಾ ||

3. ದೈನಂದಿನ ಜೀವನದಲ್ಲಿ ಉತ್ತಮ ನಡವಳಿಕೆ ಎಂದರೆ ಹೇಗಿರಬೇಕು? ಹೇಗೆ ನಡೆದುಕೊಂಡರೆ ನಮಗೆ ಒಳಿತಾಗುತ್ತದೆ ಎಂಬ ಲೌಕಿಕ ಸಲಹೆಗಳನ್ನು ಈ ಸಾಲುಗಳಲ್ಲಿ ನೋಡಬಹುದು.

ಕೊಡಬೇಕುತ್ತಮನಾದವಂಗೆ ಮಗಳಂ, ಸತ್ಪಾತ್ರಗಂ ದಾನಮಂ |
ಇಡಬೇಕೀಶ್ವರನಲ್ಲಿ ಭಕ್ತಿರಸಮಂ, ವಿಶ್ವಾಸವಂ ಸ್ವಾಮಿಯೋ-
ಳ್ಬಿಡಬೇಕೈ ಧನಲೋಭ, ಬಂಧುಜನರೊಳ್ದುಷ್ಟಾತ್ಮರೋಳ್ಗೋಷ್ಠಿಯಂ |
ಇಡಬೇಕಿದ್ದುಣಬೇಕಲೈ ! ಹರಹರಾ ಶ್ರೀ ಚನ್ನ ಸೋಮೇಶ್ವರಾ ||

ಮುಂದಿನ ಪುಟ ನೋಡಿ ...

4. ಕೇವಲ ಹೊರಗಿನ ಶುಚಿ ಶುಚಿಯಲ್ಲ

ಪೊಡೆಯೊಳ್ ತುಂಬಿರೆ ಪಂಕ ಮೇಲೆ ತೊಳೆಯಲ್ ತಾಂ ಶುದ್ಧಮೇನಪ್ಪುದೇ |
ಕಡು ಪಾಪಿಷ್ಠನು ಮೀಯಲೇನು ಶುಚಿಯೇ ಕಾಕಾಳಿ ತಾಂ ಮೀಯವೇ ||
ಗುಡಪಾನಂಗಳೊಳಿರ್ದ ಬೇವಿನ ಫಲಂ ಸ್ವಾದಪ್ಪುದೇ ಬಾಹ್ಯದೊಳ್ |
ಮಡಿಯೇಂ? ನಿರ್ಮಲಚಿತ್ತವೇ ಮಡಿ ಹರಹರಾ ಶ್ರೀ ಚನ್ನ ಸೋಮೇಶ್ವರಾ ||

"ಹೊಟ್ಟೆಯಲ್ಲಿ ಕಲ್ಮಷವಿರುವಾಗ ಹೊರಗೆ ತೊಳೆದರೆ ಶುದ್ಧವಾಗುವುದೇ? ಪಾಪಿಷ್ಠನು ಎಷ್ಟು ಮಿಂದರೇನು. ಗೂಬೆಯೂ ಮೀಯುವುದಿಲ್ಲವೇ? ಬೆಲ್ಲದ ರಸದಲ್ಲಿ ಇಟ್ಟರೆ ಬೇವಿನ ಹಣ್ಣು ಸಿಹಿಯಾಗುವುದೇ? ಹೊರಗಿನ ಮಡಿಯಿಂದೇನು, ನಿರ್ಮಲ ಚಿತ್ತವೇ ಮಡಿ."

5. ದೊರೆಗಳಿಗೆ ನೆಂಟರು, ಸ್ನೇಹಿತರು ಎಂಬ ಬಾಂಧವ್ಯವಿಲ್ಲ

ಬರೆ ದಾರಿದ್ರ್ಯದಿ ದ್ರೋಣನಂ ದ್ರುಪದ ಪೂರ್ವಸ್ನೇಹದಿಂ ಕಂಡನೇ?
ಕುರು ಭೂಪಾಲನು ಪಾಂಡುಪುತ್ರರು ಮಹಾಧರ್ಮಾತ್ಮರೆಂದಿತ್ತನೇ ||
ಹರಿಯಂ ತಂಗಿಯ ಬಾಲನೆಂದು ದಯೆಯಿಂ ಕಂಸಾಸುರ ಕಂಡನೇ?
ದೊರೆಗಳ್ಗೆತ್ತಣ ನಂಟರೈ ಹರಹರಾ ಶ್ರೀ ಚನ್ನ ಸೋಮೇಶ್ವರಾ ||

ಎಷ್ಟೋ ಜನ ದೊರೆಗಳು ತಮ್ಮ ಸಮೀಪದ ಬಂಧುಗಳನ್ನೆಲ್ಲ ಕೊಲ್ಲಿಸಿಯೋ ಅಥವಾ ಗಡೀಪಾರು ಮಾಡಿದ ಮೇಲೆಯೇ ಸಿಂಹಾಸನವನ್ನೇರಿದರು ಎಂಬ ಚಾರಿತ್ರಿಕ ಸತ್ಯವು ಈ ಚರಣದ ಅಭಿಪ್ರಾಯವನ್ನು ಪುಷ್ಟೀಕರಿಸುವದಲ್ಲವೇ?

6. ಸ್ತ್ರೀಯರ ಮನಸ್ಸನ್ನು ಅರಿಯುವುದು ಅಸಾಧ್ಯ

ಕ್ಷಿತಿಯಂ ಶೋಧಿಸಲಕ್ಕು ತಾರೆಗಳ ಲೆಕ್ಕಂ ಮಾಡಲಕ್ಕಾಗಸೋ-
ನ್ನತಿಯಂ ಕಾಣಲುಬಕ್ಕು ಸಾಗರೆಗಳೇಳುಂ ದಾಂಟಲಕ್ಕು; ನಭೋ-
ಗತಿಯಂ ಸಾಧಿಸಲಕ್ಕು: ಬೆಟ್ಟಗಳ ಚೂರ್ಣಂ ಮಾಡಿಸಲಕ್ಕೀಷ್ಟಿಸ-
ಲ್ಸತಿಯರ್ಚಿತ್ತವಭೇದ್ಯವೈ ! ಹರಹರಾ ಶ್ರೀ ಚನ್ನ ಸೋಮೇಶ್ವರಾ ||

ಅಂದಿಗೆ ಅಸಾಧ್ಯವೆನಿಸಿದ ಈ ಕಾರ್ಯಗಳೆಲ್ಲವನ್ನೂ ಈಗಿನ 21ನೆಯ ಶತಮಾನದಲ್ಲಿ ಸಾಧಿಸುವ ಹಂತಕ್ಕೆ ತಲುಪಿದ್ದೇವೆ; ಆದರೂ, ಸ್ತ್ರೀಯರ ಮನಸ್ಸನ್ನು ಅರಿಯಲು ಸಾಧ್ಯವೇ?.ಸರ್ವಜ್ಞನೂ ಇದನ್ನೇ ಹೇಳಿದ್ದಾನೆ:

ಅಂಬುಧಿಯ ಗಾನವನು ಅಂಬರದ ಕಲಹವನು
ಶಂಭುವಿನ ಮಹಿಮೆ ಸತಿಯರ ಹೃದಯವ
ನಿಂಬರಿದವರು ಯಾರು ಸರ್ವಜ್ಞ

7. ತಮಗೆ ಮುಂದಾಗಬಹುದಾದ ಕಷ್ಟ ಹಾನಿಗಳ ಪರಿವೆಯೇ ಇಲ್ಲದೆ ನಿಜವಾದ ದಾನಿಗಳು ತಮ್ಮನ್ನು ಯಾಚಿಸಿದವರಿಗೆ ಏನನ್ನು ಬೇಕಾದರೂ ಕೊಡಲು ಸಿದ್ಧರು.

ಅಡಿಮೂರೀಯೆನಲೀಯನೇ ಬಲಿನೃಪಂ ಮೂಲೋಕಮಂ? ದೇಹವಂ
ಕಡಿದೀಯೆಂದೆನೆ ಪಕ್ಕಿಗೀಯನೇ ನೃಪಂ ತನ್ನಂಗವಾದ್ಯಂತವಂ ||
ಮೃಡ ಬೇಕೆಂದೆನೇ ಸೀಳ್ದು ತನ್ನ ಸುತನಂ ನೈವೇದ್ಯವಂ ಮಾಡನೇ?
ಕೊಡುವರ್ಗಾವುದು ದೊಡ್ಡಿತೈ? ಹರಹರಾ ಶ್ರೀ ಚನ್ನ ಸೋಮೇಶ್ವರಾ ||

"ವಾಮನನು ಮೂರು ಅಡಿ ಭೂಮಿಯನ್ನು ಬೇಡಿದಾಗ ಕೊಡುವೆನೆಂದ ಬಲಿ ಚಕ್ರವರ್ತಿಯು, ಅದೇ ವಾಮನನು ತ್ರಿವಿಕ್ರಮನಾಗಿ ಬೆಳೆದಾಗ, ತನ್ನ ವಶದಲ್ಲಿದ್ದ ಮೂರು ಲೋಕವನ್ನೂ ದಾನ ಮಾಡಿಬಿಟ್ಟನಲ್ಲವೇ? ಶಿಬಿ ರಾಜನು ತನ್ನ ದೇಹವೆಲ್ಲವನ್ನೂ ಪಕ್ಷಿ ರೂಪದಲ್ಲಿದ್ದ ಇಂದ್ರನಿಗೆ ಕೊಡಲು ಸಿದ್ಧನಾಗಿದ್ದನಲ್ಲವೇ?

ಮುಂದಿನ ಪುಟ ನೋಡಿ ...

ಈಶ್ವರನು ಅತಿಥಿಯಾಗಿ ಬಂದು ಊಣಲು ನರಮಾಂಸವನ್ನು ಬೇಡಿದಾಗ, ಭಕ್ತ ಸಿರಿಯಾಳನು ತನ್ನ ಮಗನನ್ನೇ ಕೊಂದು ಬಡಿಸುವುದಕ್ಕೆ ಸಜ್ಜಾಗಿದ್ದನಲ್ಲವೇ?"

8. ಮನ್ಮಥನನ್ನು ಯಾರೂ ಎದುರಿಸಿ ಗೆಲ್ಲಲಾರರು.

ಸುತೆಯೆಂದಳ್ಕಿದುದಿಲ್ಲ ಬೊಮ್ಮ, ಋಷಿ ತಾಂ ಚಂಡಾಲವೆಣ್ಣೆಂದರುಂ
ಧತಿಯಂ ಬಿಟ್ಟನೆ? ವಿಷ್ಣು ಗೋಪವಧುಗಳ್ ಬೇಡೆಂದನೇ? ಚಂದ್ರಮಂ ||
ಮತವಲ್ಲವೆಂದನೆ? ಭೀಮನಾದನುಜೆಯೆಂದುಂ ಮಾಣ್ದನೇ? ನೋಡಿ ಮ-
ನ್ಮಥನಂ ಗೆಲ್ವವನಾವನೈ ಹರಹರಾ ಶ್ರೀ ಚನ್ನ ಸೋಮೇಶ್ವರಾ ||

"ಬ್ರಹ್ಮನು ತಾನೇ ಸೃಷ್ಟಿಸಿದ ಸರಸ್ವತಿಯನ್ನು ಮದುವೆಯಾಗಲು ಹಿಂತೆಗೆಯಲಿಲ್ಲ; ವಸಿಷ್ಠನು ಚಂಡಾಲ ಹೆಣ್ಣೆಂದು ಅರುಂಧತಿಯನ್ನು ವರಿಸದೆ ಬಿಡಲಿಲ್ಲ; ವಿಷ್ಣುವು ಗೊಲ್ಲ ಹುಡುಗಿಯರನ್ನು ನಿರಾಕರಿಸಲಿಲ್ಲ; ಶಾಸ್ತ್ರ, ಧರ್ಮ ನೀತಿ ಇವು ಯಾವುದರ ಸಮ್ಮತವಿಲ್ಲದಿದ್ದರೂ, ಚಂದ್ರನು ಬೃಹಸ್ಪತಿಯ ಪತ್ನಿ ತಾರೆಯನ್ನು ಅಪಹರಿಸಿದನು; ಭೀಮನು ರಾಕ್ಷಸಿ ಎಂದು ಹಿಡಿಂಬೆಯನ್ನು ಮದುವೆಯಾಗದೆ ಬಿಡಲಿಲ್ಲ. ಮನ್ಮಥನನ್ನು ಗೆದ್ದವರಾರು?"

ಇದು ನಿಜವಿರಬಹುದು. ಆದರೆ ಕುಲಶೇಖರ ಆಳ್ವಾರರು (9 ನೆಯ ಶತಮಾನ) ತಮ್ಮ ಮುಕುಂದ ಮಾಲೆಯಲ್ಲಿ ಹೇಳುವುದನ್ನು ಕೇಳಿರಿ:

ಮದನ ಪರಿಹರ ಸ್ಥಿತಿಂ ಮದೀಯೇ
ಮನಸಿ ಮುಕುಂದ ಪಾದಾರವಿಂದ ಧಾಮ್ನಿ |
ಹರನಯನ ಕೃಶಾನುನಾ ಕೃಶೋಸಿ
ಸ್ಮರಸಿ ನ ಚಕ್ರ ಪರಾಕ್ರಮಂ ಮುರಾರೇಃ||

"ಹೇ ಮನ್ಮಥ! ಮುಕುಂದನ ಪಾದಾರವಿಂದಗಳಿಗೆ ನೆಲೆಯಾಗಿರುವ ನನ್ನ ಮನಸ್ಸನ್ನು ತೊರೆ. ನೀನು ಈಗಾಗಲೇ ಶಿವನ ಹಣೆಗಣ್ಣಿನ ಬೆಂಕಿಯಿಂದ ಕ್ಷೀಣವಾಗಿರುವೆ. ಇನ್ನು ನಿನಗೆ ಮುರಾರಿಯ ಸುದರ್ಶನ ಚಕ್ರದ ನೆನಪಿಲ್ಲವೋ?"

ಕೊನೆಯ ಮಾತು

ಈಗಿನ ಕಾಲದಲ್ಲಿ ಸೋಮೇಶ್ವರ ಶತಕದಲ್ಲಿ ಪ್ರಸ್ತಾಪಿಸಿರುವ ವಿಚಾರಗಳೆಲ್ಲವನ್ನೂ ಶತಃ ಪ್ರತಿಶತ್ ಒಪ್ಪುವುದಕ್ಕಾಗದಿದ್ದರೂ, ಅವುಗಳಲ್ಲಿರುವ ಅನೇಕ ಅಭಿಪ್ರಾಯಗಳು ಇಂದಿಗೂ ಅನ್ವಯಿಸುತ್ತವೆ ಮತ್ತು ಅವುಗಳಲ್ಲಿರುವ ಬೋಧನೆಗಳು ಇಂದಿಗೂ ವಿವೇಕ ಪ್ರದಾಯಕ ಎಂಬುದರಲ್ಲಿ ಸಂಶಯವಿಲ್ಲ.ಪುರಾಣ ಇತಿಹಾಸಗಳ ವಿವಿಧ ವೃತ್ತಾಂತಗಳ ನೆರವಿನಿಂದ ಯಾವುದೇ ಒಂದು ವಿಷಯವನ್ನು ವಿಶದೀಕರಿಸುವ ಅವನ ಶೈಲಿಯಂತೂ ಗಮನಾರ್ಹವಾದದ್ದು.

ಈ ಕೃತಿಯ ಕೊನೆಯ (ಭರತವಾಕ್ಯಕ್ಕಿಂತ ಹಿಂದಿನ) ವೃತ್ತವೂ ಈ ಶತಕಗಳನ್ನು ಓದಿ ಅಭ್ಯಾಸ ಮಾಡುವುದರಿಂದ ಆಗುವ ಪ್ರಯೋಜನಗಳನ್ನು ವಿವರಿಸುತ್ತದೆ.

ಮತಿಯಂ ಬುದ್ಧಿಯ ಜಾಣ್ಮೆಯಂ ಗಮಕಮಂ ಗಾಂಭೀರ್ಯಮಂ ನೀತಿಯಾ - |
ಯತಮಂ ನಿಶ್ಚಲ ಚಿತ್ತಮಂ ನೃಪವರಾನಾಸ್ಥಾನೋಚಿತಾರ್ಥಂಗಳಂ |
ಅತಿಮಾಧುರ್ಯ ಸುಭಾಷಿತಂಗಳ ಮಹಾಸತ್ಕೀರ್ತಿಯಂ ಬಾಳ್ಕೆಯಂ |
ಶತಕಾರ್ಥ ಕೊಡದಿರ್ಪುದೇ ? ಹರಹರಾ ಶ್ರೀ ಚನ್ನ ಸೋಮೇಶ್ವರಾ ||

ಪುತ್ತೂರು ನರಸಿಂಹ ನಾಯಕರು ಸೋಮೇಶ್ವರ ಶತಕದ ಹಲವಾರು ಚರಣಗಳನ್ನು ತಮ್ಮ ಮಾಧುರ್ಯವಾದ ಧ್ವನಿಯಿಂದ ಹಾಡಿದ್ದಾರೆ. ಅದನ್ನು ಕೆಳಗಿನ ಲಿಂಕ್ ಮೂಲಕ ಕೇಳಬಹುದು. ▪
https://www.youtube.com/watch?v=eucMqEvvAuA

ಸಿಡ್ನಿಯಲ್ಲಿ ನಡೆದ ಬೆಳಕಿನ ಉತ್ಸವ - ವಿವಿಡ್ ಸಿಡ್ನಿ

ಛಾಯಾಗ್ರಾಹಕರು: ರಾಜೇಶ್ ಕುಮಾರ್

ರಾಂ ರಾಮ

ಇದು ಹಾಸ್ಯ ಪುಟ

ಶ್ರೀ ರಾಮನಾಥ್ ಅವರು ಉತ್ತರಿಸುವ "ನೀವು ಕೇಳಿದಿರಿ" ಬ್ಲಾಗ್ನಲ್ಲಿ ಲಭ್ಯ. ಕೆಳಗಿನ ಲಿಂಕ್ ಕ್ಲಿಕ್ ಮಾಡಿ

ನೀವು ಕೇಳಿದಿರಿ

ರಾಮನಾಥ್
ಭಾಷಣಕಾರರು, ಹಾಸ್ಯ ಲೇಖಕರು

ಸಿಎಂ ಕಾರೇರಿದ ಕಾಗೆಯೊಡನೆ ಒಂದು ಸಂದರ್ಶನ

'ನಮಸ್ಕಾರ ಕಾಕಾ, ನಿನ್ನ ಸಂದರ್ಶನ ಬೇಕಿತ್ತು' ಶನಿಯನ್ನೇ ಬೆನ್ನಿಗೇರಿಸಿಕೊಳ್ಳುವ ಕಾಗೆಗೆ ರಿಪೋರ್ಟರ್ ಸೀನು ಬೆನ್ನುಬಿದ್ದ.

'ಆರ್ನಬ್ ಗೋಸ್ವಾಮಿಯಂತೆ ನೀನೇ ಮಾತನಾಡದೆ ನನಗೆ ಉತ್ತರಿಸಲು ಅವಕಾಶ ಕೊಟ್ಟರೆ ಮಾತ್ರ' ಕಾಗೆ ಮರುನುಡಿಯಿತು.

'ಓಕೆ. ಅಷ್ಟೆಲ್ಲ ಜಾಗ ಇದ್ದರೂ ಸಿಎಂ ಕಾರಿನ ಮೇಲೇ ಕುಳಿತದ್ದು ಏಕೆ?'

'ಪಕ್ಷದಲ್ಲಿ ಹೈಲೆವೆಲ್‌ನಲ್ಲಿರೋವ್ರನ್ನ ಪಕ್ಷಿಗಳಲ್ಲಿ ಹೈಲೆವೆಲ್‌ನಲ್ಲಿರೋವ್ರು ಭೇಟಿಯಾಗೋದು ಪಕ್ಷಿಧರ್ಮ'

'ನೀನು ಹೈಲೆವೆಲ್ ಪಕ್ಷಿಯೇ?'

'ಡೌಟ್ ಯಾಕೆ? ಪ್ರತಿ ಎಲೆಕ್ಟ್ರಿಕ್ ಲೈನ್ ಮೇಲೂ ನಾವು ಸಾಲಾಗಿ ಕೂತ್ಕೊಳೋದನ್ನ ಕಂಡಿಲ್ವಾ?'

'ಹೌದು. ಆದರೆ ಕರೆಂಟ್ ಹೊಡೆಯೋ ಭಯ ಇಲ್ಲವಾ ನಿಮಗೆ?'

'ಕರೆಂಟ್ ಇದ್ದರಲ್ವೇ ಹೊಡೆಯಕ್ಕೆ! ಸಿಟೀಲಿ ಮಾತ್ರ ಕೊಂಚ ಎಡವಟ್ಟು. ಹಳ್ಳಿಗಳಲ್ಲಿ ಆನ್‌ಲೈನ್ ಸಪ್ತಾಹ ಆಚರಿಸಿದರೂ ಕರೆಂಟ್ ಹೊಡೆಯೋ ಭೀತಿ ಇಲ್ಲ'

'ಆನ್‌ಲೈನ್ ಸಪ್ತಾಹ? ಅಂದರೆ ಇಂಟರ್ನೆಟ್‌ನಲ್ಲಿ ಚ್ಯಾಟ್ ಮಾಡುವುದೇ?'

'ಛಿ! ನೆಟ್‌ಗೆ ಅಡಿಕ್ಟ್ ಆಗಕ್ಕೆ ನಾವೇನು ಟೀನೇಜ್ ಕಿಡ್ಸ್ ಅಲ್ಲ. ಆನ್‌ಲೈನ್ ಅಂದರೆ ವಿದ್ಯುತ್ ಲೈನ್ ಮೇಲೆ ಕುಳಿತು ಅಂತ ಅರ್ಥ'

'ಆದರೂ ಕೆಲವೊಮ್ಮೆ ಕರೆಂಟ್ ಹೊಡೆಸಿಕೊಳ್ತೀರಲ್ಲಾ....?'

'ಆಡಳಿತ ಪಕ್ಷದಲ್ಲಿರುವ ಭಿನ್ನಮತೀಯರ ಕೈವಾಡ. ಸಿಎಂಗೆ ಕೆಟ್ಟ ಹೆಸರು ಬರಲೀಂತ ಅನ್‌ಶೆಡ್ಯೂಲ್ಡ್ ಪವರ್ ಸಪ್ಲೈ ಮಾಡಿಬಿಡುತ್ತಾರೆ!'

'ಈಗ ಸಿಎಂ ಕಾರ್ ಬಳಿ ಬಂದ ಕಾರಣ?'

'ಅಭಿನಂದಿಸಲು, ಸಲಹೆ ನೀಡಲು'

'ಯಾವುದಕ್ಕೆ ಅಭಿನಂದನೆ?'

'ಮುಖ್ಯಮಂತ್ರಿಗಳ ನೀರಿನ ಸಮಸ್ಯೆ ಬಗೆಹರಿಸದೆ ಇರುವುದರ ಬಗ್ಗೆ.'

'ಅದಕ್ಕೇಕೆ ಅಭಿನಂದನೆ?'

'ನೀರಿನ ಸಮಸ್ಯೆ ಬಗೆಹರಿದರೆ ಎಲ್ಲೆಲ್ಲೂ ನೀರು ದೊರಕುತ್ತದೆ. ನೀರು ಹರಿದುಬಂದರೆ ರೈತ ಬೆಳೆ ಬೆಳೆಯುತ್ತಾನೆ. ಬೆಳೆದ ಬೆಳೆಯನ್ನು ಮಾರಲು ನಗರಕ್ಕೆ ಹೊರಡುತ್ತಾನೆ. ಈಗಿನ ದಿನಗಳಲ್ಲಿ ಹೆದ್ದಾರಿಗಳಲ್ಲಿ ಆಕ್ಸಿಡೆಂಟ್ ಜಾಸ್ತಿ. ರೈತರ ಜೀವಕ್ಕೆ ಅಪಾಯ. ರೈತರು ದೇಶದ ಬೆನ್ನೆಲುಬು. ಸಾಯಬಾರದು. ಆದ್ದರಿಂದ ಹೆದ್ದಾರಿಗೆ ಹೋಗಬಾರದು. ಹೆದ್ದಾರಿಗೆ ಹೋಗಬಾರದಾದರೆ ಬೆಳೆ ಬೆಳೆಯಬಾರದು. ಬೆಳೆ ಬೆಳೆಯಬಾರದಾದರೆ ನೀರಿರಬಾರದು. ನೀರಿರಬಾರದಾದರೆ ಎತ್ತಿನಹೊಳೆ, ಕಳಸಾ-ಬಂಡೂರಿ ಸಮಸ್ಯೆಗಳು ಇತ್ಯರ್ಥವಾಗಬಾರದು, ಅಪ್ಪಿತಪ್ಪಿ ಮಳೆ ಹೆಚ್ಚಾಗಿ ನೀರು ತುಂಬಿಬಿಟ್ಟರೆ ಪಕ್ಕದ ರಾಜ್ಯಕ್ಕೆ ನೀರು ಬಿಟ್ಟು ನೀರಿನ ಕೆಳಮಟ್ಟ ಕಾಪಾಡಿಕೊಳ್ಳಬೇಕು. ಆಗ ಮಾತ್ರ ರೈತ ಮನೆಯಲ್ಲಿ ಇರುತ್ತಾನೆ. ಹಾಗೆ ಇರಲೆಂದೇ ರೈತರಿಗೆ ಅಷ್ಟೊಂದು ಭಾಗ್ಯಗಳನ್ನು ಕೊಟ್ಟಿದ್ದು. ಸಿಎಂ ರೈತಪರ. ಸಿಎಂಗೆ ಜೈ, ಅಭಿನಂದನೆಗಳು ಎಂದು ನುಡಿಯಲು ಬಂದೆ. ವೈದ್ಯಕೀಯ ರಂಗದ ಬಗ್ಗೆಯೂ ಸಿಎಂಗೆ ವಿಶೇಷ ಕಾಳಜಿ. ಅದಕ್ಕೇ ಅವರು ಹೆಚ್ಚುಹೆಚ್ಚು ಬಾರ್‌ಗಳಿಗೆ ವೈನ್‌ಸ್ಟೋರ್‌ಗಳಿಗೆ ಲೈಸೆನ್ಸ್ ನೀಡುತ್ತೇನೆ ಎನ್ನುತ್ತಿರುವುದು.'

'ಅದಕ್ಕೂ, ಇದಕ್ಕೂ ಏನು ಸಂಬಂಧ?'

'ಪ್ರತಿ ವರ್ಷ ಸಾವಿರಾರು ವಿದ್ಯಾರ್ಥಿಗಳು ಎಂಬಿಬಿಎಸ್ ಪಾಸ್ ಮಾಡುತ್ತಾರೆ. ಅವರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಪೇಷಂಟ್‌ಗಳು ದೊರಕದಿದ್ದರೆ ನಿರುದ್ಯೋಗ ಸಮಸ್ಯೆ ಉದ್ಭವಿಸುತ್ತದೆ. ಸಮಸ್ಯೆ ಉದ್ಭವಿಸುವುದಕ್ಕೆ ಮುಂಚೆಯೇ ಪರಿಹಾರ ಕಂಡುಹಿಡಿಯುವುದು ಸಮರ್ಥರ ಲಕ್ಷಣ. ಹೆಚ್ಚು ಹೆಚ್ಚು ಬಾರ್, ಹೆಚ್ಚು ಹೆಚ್ಚು ವೈನ್‌ಸ್ಟೋರ್‌ಗಳಿಂದ ಹೆಚ್ಚು ಹೆಚ್ಚು ಕುಡಿತ; ಕುಡಿತ ಹೆಚ್ಚಿದಂತೆ ಆಕ್ಸಿಡೆಂಟ್ ಹೆಚ್ಚು; ಕ್ಯಾನ್ಸರ್ ಹೆಚ್ಚು; ಲಿವರ್ ಫೇಲ್ಯೂರ್ ಹೆಚ್ಚು. ಹೀಗಾಗಿ ಹೊರಬಂದ ವೈದ್ಯರಿಗೆ ಕೈತುಂಬಾ ಕೆಲಸ ಇರುತ್ತದೆ. ಇಂತಹ ಮುಂದಾಲೋಚನೆ ಬಿಹಾರದವರಿಗೆ ಇಲ್ಲದಿರುವುದರಿಂದಲೇ ಅವರು ಲಿಕ್ಕರ್ ಬ್ಯಾನ್ ಮಾಡಿದ್ದು. ದಡ್ಡರು!' ಕಾಗೆ ಹರಿಹಾಯ್ದಿತು.

'ಇವೆಲ್ಲ ಅಭಿನಂದನೆಗಳಾದವು. ಸಲಹೆಗಳು?'

'ಸಿಎಂ ಜನವಿರೋಧಿ ಯೋಜನೆಗಳನ್ನು ಹಮ್ಮಿಕೊಳ್ಳಬೇಕು'

'ಏಕೆ?'

ಮುಂದಿನ ಪುಟ ನೋಡಿ ...

‘ಆಗ ಎಲ್ಲೆಡೆ ರ‍್ಯಾಲಿ ನಡೆದು ಜನ ಕಲ್ಲು ಬೀಸುತ್ತಾರೆ.’

‘ಅದರಿಂದೇನು ಪ್ರಯೋಜನ?’

‘ರಸ್ತೆಯಲ್ಲಿರುವ ಗುಂಡಿಗಳನ್ನು ಆ ಎಸೆದ ಕಲ್ಲುಗಳನ್ನು ಬಳಸಿ ತುಂಬಿಸಬಹುದು.’

‘ಅದರಿಂದೇನು ಲಾಭ?’

‘ನಮ್ಮ ಕಾಗೆಗಳ ಬಳಗಕ್ಕೆ ಎಲ್ಲೋ ಹಳ್ಳದಲ್ಲಿರುವ ನೀರು ಕುಡಿಯುವುದು ಕಷ್ಟ. ಹೀಗೆ ಕಲ್ಲುಗಳನ್ನು ತುಂಬಿದಾಗ ಮೇಲಕ್ಕೇರಿದ ನೀರನ್ನು ನಾವು ಕುಡಿಯಲು ಅನುಕೂಲ’

‘ಛಿ! ನಿನ್ನ ಸ್ವಾರ್ಥಕ್ಕಾಗಿ ರ‍್ಯಾಲಿ ನಡೆಸಿ ಸಿಎಂ ಸೀಟ್ ಕಳೆದುಕೊಳ್ಳಬೇಕೆ?’

‘ದಡ್ಡ. ಸೀಟಿಗೂ, ಯೋಜನೆಗಳಿಗೂ ಏನೇನೂ ಸಂಬಂಧವಿಲ್ಲ. ಹಣದ ಹೊಳೆ, ಹೆಂಡದ ಕೊಳೆ ಸೇರಿದರೆ ಓಟಿನ ಮಳೆ’

‘ನೀರು ಬೇಕೆಂದರೆ ನೇರವಾಗಿ ಕೆರೆಗಳಿಗೆ ಹಾರಿಹೋಗಿ ಕುಡಿಯಬಹುದಲ್ಲ?’

‘ಪರಮನೀಚ! ಕೆರೆಯ ನೀರು ವಿಷ. ನಾವೇ ಹಾರಿಹೋಗಿ ಕುಡಿದರೆ ಆತ್ಮಹತ್ಯೆ ಮಾಡಿಕೊಂಡಂತಾಗುತ್ತದೆ. ಆತ್ಮಹತ್ಯೆ ಮಹಾಪಾಪ. ಜೊತೆಗೆ ಆತ್ಮಹತ್ಯೆ ಮಾಡಿಕೊಳ್ಳಲು ನಾವೇನು ಎಸ್‌ಎಸ್‌ಎಲ್‌ಸಿ, ಪಿಯುಸಿ ಫೇಲಾದ ಸ್ಟೂಡೆಂಟುಗಳೂ ಅಲ್ಲ, ಲವ್ ಡಿಸಪಾಯಿಂಟ್ ಆದ ಪ್ರೇಮಿಗಳೂ ಅಲ್ಲ. ಈ ನಿನ್ನ ಸಲಹೆಯನ್ನು ಕಾಕಾಕಾರವಾಗಿ ತಿರಸ್ಕರಿಸಲಾಗಿದೆ.’

‘ಕಮ್ ಟು ದ ಪಾಯಿಂಟ್. ದ ಸ್ಟೇಟ್ ವಾಂಟ್ಸ್ ಟು ನೋ...’

‘ನೀನು ಆರ್ನಬ್ ಗೋಸ್ವಾಮಿಯಂತೆ ಆಡುತ್ತಿರುವೆ. ನಾನು ಹೊರಟೆ.’

‘ನಿಲ್ಲು. ವಿಷಯಾಂತರ ಬೇಡ. ಇನ್ನೇನು ಸಲಹೆಗಳನ್ನು ನೀಡಬಯಸಿದ್ದೆ?’

‘ನನ್ನ ಪೂರ್ವಜನೊಬ್ಬನ ಕಥೆ ಹೇಳಬಯಸಿದ್ದೆ’

‘ಯಾವ ಕಥೆ?’

‘ಕಾಗೆಯೊಂದು ಬಾಯಲ್ಲಿ ಮಾಂಸ ಇಟ್ಟುಕೊಂಡು ಮರದಮೇಲೆ ಕುಳಿತಿತ್ತು. ನರಿಯೊಂದು ಆ ಮಾಂಸವನ್ನು ಪಡೆಯುವ ಸಲುವಾಗಿ ‘ಎಲೈ ಕಾಗೆಯೆ, ನೀನು ಬೆಳಗ್ಗೆ ಹಾಡುತ್ತಿದ್ದಾಗ ನಿನ್ನ ಕಂಠಮಾಧುರ್ಯಕ್ಕೆ ಬೆರಗಾದೆ. ನಿನ್ನ ವೆಸ್ಟ್ರನ್ ಮ್ಯೂಸಿಕ್ ಕಂಠದ ಮುಂದೆ ಆ ಇಂಡಿಯನ್ ಕ್ಲಾಸಿಕಲ್ ಕೋಗಿಲೆಯ ಕಂಠ ಕಂಠವೇ ಅಲ್ಲ. ಎಲ್ಲಿ, ಒಂದು ಜಿಂಗಲ್ ಹಾಗನ್ನು...’ ಎಂದು ಪುಸಲಾಯಿಸಿತು. ಆ ಕಾಗೆಯೋ ದೆಹಲಿಯ ಮುಖಂಡತ್ವ ವಹಿಸಿರುವ ಕೂಸೊಂದರಷ್ಟೇ ದಡ್ಡ. ಒಂದೇ ವ್ಯತ್ಯಾಸ. ಈ ಕೂಸು ಬಾಯಿಬಿಟ್ಟರೆ ಮತಗಳ ಸಂಖ್ಯೆ ಬೀಳುತ್ತದೆ. ಆ ಕಾಗೆ ಬಾಯಿ ಬಿಟ್ಟಾಗ ಬಾಯಲ್ಲಿದ್ದ ಮಾಂಸ ಕೆಳಬಿದ್ದಿತು. ಈ ಕಥೆಯನ್ನು ಸಿಎಂಗೆ ಹೇಳಬೇಕಿತ್ತು.’

‘ಏಕೆ?’

‘ಸಿಎಂ ಸುತ್ತಲೂ ಅದೇ ನರಿಯ ಜಾತಿಯವರು ಹಲವರು ಸಿಎಂನ ಬಾಯಲ್ಲಿರುವ ಮಾಂಸ, ಉರುಫ್ ಅಧಿಕಾರ ಕಿತ್ತುಕೊಳ್ಳಲು ಹೊಂಚುಹಾಕುತ್ತಿದ್ದಾರೆಂದು ಹೇಳಲು.’

‘ಇದರಿಂದ ನಿನಗೇನು ಲಾಭ?’

‘ಬ್ರಿಟನ್‌ನಲ್ಲಿ ರೇವನ್ ಎಂಬ ಕಪ್ಪನೆಯ, ಚಿಕ್ಕ, ಅಶುಭಸೂಚಕ ಪಕ್ಷಿಯೊಂದಿದೆ. ಅದರ ಗುಂಪಿಗೆ ಕಾಂಗ್ರೆಸ್ ಎಂದು ಕರೆಯುತ್ತಾರೆ. ನಾವು ಕಾಗೆಗಳೂ ಕಪ್ಪನೆಯ, ಚಿಕ್ಕ, ಅಶುಭಸೂಚಕ ಪಕ್ಷಿಗಳೇ. ರೇವನ್‌ಗಳು ನಮ್ಮ ಫಾರಿನ್ ಕಸಿನ್‌ಗಳು. ಆದ್ದರಿಂದ ನಾವೂ ಕಾಂಗ್ರೆಸ್ಸಿಗರೇ.’

‘ಆದರೇನು?’

‘ಒಂದೇ ಪಕ್ಷದವರಾದ್ದರಿಂದ ಸಂಪುಟ ಪುನಾರಚನೆ ಮಾಡುವಾಗ ನಮಗೂ ಒಂದು ಸೀಟ್ ಕೇಳೋಣಾಂತ ಇವೆಲ್ಲ ಸಲಹೆ, ಅಭಿನಂದನೆ, ಇತ್ಯಾದಿ. ಕಾಕಾ ಹಿಡಿಯಬೇಕಲ್ಲವೇ!’

‘ಸಿಎಂ ಸೀಟ್ ಕೊಡಲು ಒಪ್ಪಿದರೇನು?’

‘ಆಗಲ್ಲ ಎಂದರು. ಗುಬ್ಬಚ್ಚಿಯಾದರೆ ಸಂಖ್ಯೆ ತಗ್ಗಿಹೋಗಿ ಅಲ್ಪಸಂಖ್ಯಾತವಾಗಿದೆ. ನೀನು ಬಹುಸಂಖ್ಯಾತ. ನಮ್ಮಲ್ಲಿ ಬಹುಸಂಖ್ಯಾತರಿಗೆ ಜಾಗವಿಲ್ಲ ಎಂದರು. ಅಲ್ಲದೆ ‘ನಾನು ಯಾರ ಮಾತನ್ನೂ, ಸಲಹೆಯನ್ನೂ ಕೇಳುವುದಿಲ್ಲ’ ಎಂದೂ ಗರಂ ಆಗಿ ನುಡಿದರು.’

‘ಮುಂದೆ?’

‘ದುರಂತ್ ಎಕ್ಸ್‌ಪ್ರೆಸ್ ಟಾಪ್ ಮೇಲೆ ಕುಳಿತು ವೇಗವಾಗಿ ದೆಹಲಿ ತಲುಪುತ್ತೇನೆ’

‘ಏಕೆ?’

‘ಅಲ್ಲಿರುವ ಗಿಡುಗನ ಇಂಫ್ಲುಯೆನ್ಸ್ ಬಳಸಿ ಪುನಾರಚನೆಯಲ್ಲಿ ಸೀಟ್ ಪಡೆಯಲು’ ಎನ್ನುತ್ತಾ ಕಾಗೆ ಸಿಟಿ ರೈಲ್ವೇ ಸ್ಟೇಷನ್ನಿನತ್ತ ಹಾರಿತು. ▪



ವಿಚಾರ ವಿಹಾರ

ಮಾಲು, ಅಡಿಲೈಡ್

ಸುಭಾಷಿತೇನ ಗೀತೇನ ಯುವತೀನಾಂ ಲೀಲಯಾ
ಮನೋ ನ ಬಿಧ್ಯತೆ ಯಸ್ಯ ಸ ಯೋಗಿ ಹ್ಯಥವಾ ಪಶುಹು

ಈ ಎರಡು ಸಾಲಿನ ಉಕ್ತಿ ಸುಭಾಷಿತ ಸಂವತ್ಸರದಿಂದ ಆಯ್ದದ್ದು.
ಇದರ ಅರ್ಥ?!

ಸುಭಾಷಿತ

ಸುಭಾಷಿತದಿಂದ, ಸಂಗೀತದಿಂದ ಮತ್ತು ಯುವತಿಯರ ನರ್ತನೆಯಿಂದ ಯಾವ ಮನಸ್ಸು ಸಂತಸ ಗೊಳ್ಳುವುದಿಲ್ಲವೋ, ಅಂಥವನು ಒಬ್ಬ ಮಹಾ ಯೋಗಿ ಪುರುಷ ನಾಗಿರಬೇಕು ಅಥವಾ ಪಶುವಾಗಿರಬೇಕು.

ಸುಭಾಷಿತ ಎಂದರೆ ಒಳ್ಳೆಯ ನುಡಿಗಳು.

ಸುಭಾಷಿತ ರಸವನ್ನು ಕಂಡು ದ್ರಾಕ್ಷಿ ಹಣ್ಣು ಬಾಡಿದ ಮುಖವುಳ್ಳದ್ದಾಯಿತು, ಸಕ್ಕರೆಯು ಕಲ್ಲಿನಂತೆ ಗಟ್ಟಿಯಾಯಿತು ಮತ್ತು ಅಮೃತವು ಭಯದಿಂದ ಸ್ವರ್ಗಲೋಕವನ್ನು ಸೇರಿಕೊಂಡಿತು ಎನ್ನುತ್ತಾರೆ ಪ್ರಾಜ್ಞರು.

ಸಂಸಾರವೆಂಬ ವಿಷ ವೃಕ್ಷದಲ್ಲಿ ಎರಡು ಬಗೆಯ ಹಣ್ಣುಗಳಿರುತ್ತವೆ;
ಅವುಗಳು ಯಾವುದೆಂದರೆ:
ಸುಭಾಷಿತಗಳ ರಸಸ್ವಾದ ಮತ್ತು ಸುಜನರ ಸಹವಾಸ.

ಇಷ್ಟು ಪ್ರಖ್ಯಾತವಾದ ಸುಭಾಷಿತಗಳನ್ನು ಬೇಡವೆನ್ನುವವನು ಪಶುವಲ್ಲದೆ ಮತ್ತೇನು?!
ಸಂಗೀತ ಮತ್ತು ಯುವತಿಯರ ನರ್ತನ ಇವೆರಡು ಯಾರಿಗೆ ರುಚಿಸುವುದಿಲ್ಲ! ಸಂಗೀತ ಮತ್ತು ನರ್ತನ ಇವೆರಡು ಸಮಾರಾಧನಗಳಲ್ಲಿ ಕೂಡಿವೆ. ಸಮಾರಾಧನೆ ಎಂದರೆ ಎಲ್ಲ ಜನಗಳಿಂದ ಸಮವಾಗಿ ಆರಾಧಿಸಲ್ಪಡುವವು. ಸಂಗೀತ, ಶಾಸ್ತ್ರ, ನರ್ತನ ಮತ್ತು ಭೋಜನ ಇವು ಸಮಾರಾಧನೆಗಳು. ಯುವತಿಯರ ನರ್ತನ ಮಾತ್ರ ಆಕರ್ಷಕವೇ?! ಹೌದು ಎನ್ನುತ್ತದೆ ಗೀತ ಗೋವಿಂದ.

ಭವತಿ ವಿಲಂಬಿನಿ ವಿಗಲಿತ ಲಜ್ಜಾ
ವಿಲಪತಿ ರೋದಿತಿ ವಾಸಕ ಸಜ್ಜಾ

ಜಯದೇವ ಕವಿಯ ಗೀತ ಗೋವಿಂದ ದಲ್ಲಿ ಬರುವ ಈ ರಾಧೆಯ ವಿಪ್ರಲಂಭ ನೃತ್ಯ ಗೀತೆ ಯಾರಿಗೆ ಇಷ್ಟವಾಗುವುದಿಲ್ಲ ಹೇಳಿ!
ಅರಸಿಕ ಮತ್ತು ಪಶುವಿನ ನಡುವೆ ಅಷ್ಟೇನೂ ಅಂತರವಿಲ್ಲ! ಅರಸಿಕನಿಗೂ ನೃತ್ಯ ಇಷ್ಟವಾಗುವುದಿಲ್ಲ. ಹಾಗೆಯೇ, ಪಶುವಿಗೂ ಅಷ್ಟೇ!
ಯೋಗಿ ಪುರುಷನಿಗೆ ಈ ಮೇಲೆ ತಿಳಿಸಿರುವ ಲೋಕದ ಸಹಜ ಆಕರ್ಷಣೆಗಳ ಮೇಲೆ ತಾತ್ಸಾರ. ಇವನು 'ಸ್ಥಿತ ಪ್ರಜ್ಞ'. ಇವನು ಸುಖದಲ್ಲಿ ದುಃಖದಲ್ಲಿ ನಿರ್ಲಿಪ್ತನಾಗಿರುತ್ತಾನೆ.
ಮಹಾ ಯೋಗಿ ಪುರುಷನು ಸುಭಾಷಿತ ಮತ್ತು ಯುವತಿಯರ ನರ್ತನಗಳು ಇವನನ್ನು ಆಕರ್ಷಿಸುವುದಿಲ್ಲ. ▪

ಬ್ಲಾಗ್ ಲೋಕ

ಓದಲು ಚಿತ್ರದ ಕೆಳಗಿರುವ ಲಿಂಕ್ ಕ್ಲಿಕ್ ಮಾಡಿ

ಕನಕಾಪುರ ನಾರಾಯಣ
ಇವರ "ಚಕ್ಕೆ ಮೊಗ್ಗು"

ಸುದರ್ಶನ್. ಏನ್
ಇವರ "ಅನಿವಾಸಿ"

ಬದರಿ ತ್ಯಾಮಗೊಂಡ್ಲು
ಇವರ "ಕಾವ್ಯ ಕಸ್ತೂರಿ"

ಸ್ಮಿತಾ ಮೇಲ್ಕೋಟೆ
ಇವರ "ಮಂದಹಾಸ"

ಮಹಾಂತೇಶ್ ಸಿ.
ಇವರ "ಹಂಗ ಸುಮ್ನ್..."

ಮಧ್ಯಾಹ್ನದ ಊಟಕ್ಕೊಂದು ಪೌಷ್ಟಿಕ ಆಹಾರ - ಕಡಲೆ ಬೇಳೆ ಖಿಚಡಿ

ಆಹಾರ – ಆರೋಗ್ಯ
ರಾಜಿ ಜಯದೇವ್

ಬೇಕಾಗುವ ಸಾಮಾನು

- 1 ಲೋಟ (೨೫೦ ಮಿಲಿಲೀಟರ್) ಬಸ್ಮತಿ ಅಕ್ಕಿ, 1/2 ಲೋಟ ಕಡಲೆ ಬೇಳೆ
- 4 ಟೀ ಸ್ಪೂನ್ (ಕಡ್ಲೇಕಾಯಿ) ಎಣ್ಣೆ
- 1 ಸೆಂಟಿಮೀಟರ್ ದಾಲ್ಚಿನ್ನಿ, 4 ಲವಂಗ, 4 ಏಲಕ್ಕಿ
- 1 ಲೋಟ ಹೆಚ್ಚಿದ ನೀರುಳ್ಳಿ, 5-6 ಹೆಚ್ಚಿದ ಹಸಿಮೆಣಸಿನಕಾಯಿ
- 1 ಟೀ ಸ್ಪೂನ್ ಹೆಚ್ಚಿದ ಬೆಳ್ಳುಳ್ಳಿ, 1 ಟೀ ಸ್ಪೂನ್ ಹೆಚ್ಚಿದ ಶುಂಟಿ
- 1/4 ಲೋಟ ಹೆಚ್ಚಿದ ಕೊತ್ತಂಬರಿ ಸೊಪ್ಪು, 1/4 ಲೋಟ ಹೆಚ್ಚಿದ ಪುದೀನ
- 8-10 ಎಲೆ ಕರಿಬೇವು, 1/2 ಟೀ ಸ್ಪೂನ್ ಅರಸಿನ
- 4 ಲೋಟ ಹೆಚ್ಚಿದ ಮಿಶ್ರ ತರಕಾರಿಗಳು, 1 ½ ಲೋಟ ನೀರು, ½ ಟೀಸ್ಪೂನ್ ಉಪ್ಪು (ಅಥವಾ ರುಚಿಗೆ ತಕ್ಕಷ್ಟು)
- 8-10 ಹುರಿದ ಗೋಡಂಬಿ

ವಿಧಾನ

- 1. ಅಕ್ಕಿ ಮತ್ತು ಬೇಳೆಯನ್ನು ತೊಳೆದು ಪ್ರತ್ಯೇಕವಾಗಿ ನೆನೆಹಾಕಿ. ಅರ್ಧ ಗಂಟೆಯ ನಂತರ ಬಸಿಯಿರಿ.
- 2. ಎಣ್ಣೆಯನ್ನು ಬಿಸಿಮಾಡಿ, ದಾಲ್ಚಿನ್ನಿ, ಲವಂಗ, ಏಲಕ್ಕಿ ಹುರಿಯಿರಿ. ಸುವಾಸನೆ ಬಂದ ಕೊಡಲೆ ಹೆಚ್ಚಿಟ್ಟುಕೊಂಡ ನೀರುಳ್ಳಿ, ಹಸಿಮೆಣಸಿನಕಾಯಿ, ಬೆಳ್ಳುಳ್ಳಿ, ಶುಂಟಿ, ಕೊತ್ತಂಬರಿ ಸೊಪ್ಪು, ಪುದೀನ ಹಾಕಿ ಹದವಾಗಿ ಹುರಿಯಿರಿ. ಕರಿಬೇವು, ಅರಸಿನ ಹಾಕಿ ಕೆದಕಿ.
- 3. ಅಕ್ಕಿ ಮತ್ತು ಕಡಲೆ ಬೇಳೆಯನ್ನು ಹಾಕಿ, ಹುರಿಯುವುದನ್ನು ಒಂದೆರಡು ನಿಮಿಷ ಮುಂದುವರಿಸಿ. ತರಕಾರಿ, ನೀರು, ಉಪ್ಪು ಹಾಕಿ, ನೀರು ಇಂಗುವ ತನಕ ಬೇಯಿಸಿ.
- 4. ಹುರಿದ ಗೋಡಂಬಿಯನ್ನು ಸೇರಿಸಿ, ಚೆನ್ನಾಗಿ ಕೆದಕಿ.
- ಇದು ಪ್ರೋಟೀನು, ಪಿಷ್ಟ ಪದಾರ್ಥ, ಒಳ್ಳೆಯ ಕೊಬ್ಬು ಮತ್ತು ವಿಟಮಿನ್ನುಗಳನ್ನು ಹೊಂದಿದ ಸಂತುಲಿತ ಆಹಾರ.

ಕನ್ನಡದಲ್ಲಿ ಟೈಪ್ ಮಾಡೋದು ಹೇಗೆ

ಹೊರನಾಡ ಚಿಲುಮೆ - ಸೆಪ್ಟೆಂಬರ್ ೨೦೧೩ ರ ಸಂಚಿಕೆಯಲ್ಲಿ google input tools ಉಪಯೋಗಿಸಿ ಕನ್ನಡದಲ್ಲಿ ಹೇಗೆ ಟೈಪ್ ಮಾಡಬಹುದು ಎಂದು ತಿಳಿದು ಕೊಂಡಿರಿ.

ಪೂರ್ಣ ಮಾಹಿತಿಗೆ ಸೆಪ್ಟೆಂಬರ್ ೨೦೧೩ ರ ಸಂಚಿಕೆಯನ್ನು ನೋಡಲು ಈ ಲಿಂಕ್ ಕ್ಲಿಕ್ ಮಾಡಿ.

ಸಂಕ್ಷಿಪ್ತ ಮಾಹಿತಿ ಇಲ್ಲಿದೆ

ಗೂಗಲ್ ಇನ್ಪುಟ್ ಟೂಲ್ಸ್ (Google input tools) ಯೂನಿಕೋಡ್ ಆಧಾರಿತ ಒಂದು ತಂತ್ರಾಂಶ. ಇದನ್ನು ನಿಮ್ಮ ಕಂಪ್ಯೂಟರ್ ನಲ್ಲಿ install ಮಾಡಿದರೆ ಕನ್ನಡದಲ್ಲಿ ನೀವು ನೇರವಾಗಿ word, excel ಇತ್ಯಾದಿ office ಸಾಫ್ಟ್ವೇರ್ ಅಲ್ಲದೆ, ಸಮಾಜ ತಾಣಗಳಾದ ಫೇಸ್ಬುಕ್ , ಜಿ-ಪ್ಲಸ್ ಇತ್ಯಾದಿಗಳಲ್ಲೂ ಟೈಪ್ ಮಾಡಬಹುದು.

INSTALL ಮಾಡುವ ಮತ್ತು ಉಪಯೋಗಿಸುವ ವಿಧಾನ

1. http://www.google.com/inputtools/windows/index.html - ಈ ಲಿಂಕ್ ಕ್ಲಿಕ್ ಮಾಡಿ

   ಇರುವ ಹಲವಾರು ಭಾಷೆಗಳ ಲಿಸ್ಟ್ ನಲ್ಲಿ ಕನ್ನಡ ಕ್ಲಿಕ್ ಮಾಡಿ install ಮಾಡಿ.

   ಆಂಗ್ಲ ಭಾಷೆಯಲ್ಲಿ ಟೈಪ್ ಮಾಡುತ್ತಿದ್ದಾಗ ಕನ್ನಡ ಟೈಪ್ ಮಾಡಲು ಒಟ್ಟಿಗೆ CTRL + G ಕೀ ಒತ್ತಿ. ಆಗ ಆಂಗ್ಲದಿಂದ ಕನ್ನಡಕ್ಕೆ ಕೀಲಿಮಣೆ ಸಿದ್ಧವಾಗುತ್ತದೆ. ನಂತರ ನೀವು ಮತ್ತೆ ಆಂಗ್ಲ ಪದ ಬಳಸಬೇಕಾದರೆ ಮತ್ತೆ CTRL + G ಕೀ ಒಟ್ಟಿಗೆ ಒತ್ತಿ.

ಸೂಚನೆ: ಕೆಲವೊಮ್ಮೆ ಈ ಬಾಕ್ಸ್ ಕಾಣಿಸದಿದ್ದರೆ ಒಟ್ಟಿಗೆ ALT + SHIFT ಕೀ ಒತ್ತಿ

ನೀವೂ ಜಾಹೀರಾತು ನೀಡಲು ಬಯಸುವಿರಾದರೆ ನಮಗೆ ಇ-ಮೇಲ್ ಮಾಡಿ: horanadachilume@gmail.com

Contact Mr Sudheendra Rao EMAIL
Mobile 0415 291 723

Contact Mr.Sathya Bhat EMAIL
Mobile 0412 918 511

Contact Mr Umesh EMAIL
Mobile 0401 034 456

Contact Mr Eranna Gotyal EMAIL
Mobile 0404 215 605

ಬಾವಿ

ಕನಕಾಪುರ ನಾರಾಯಣ

ಅಕ್ಬರ್ ರಾಜನ ಬಳಿ ನ್ಯಾಯಕ್ಕಾಗಿ ಆಗಾಗ್ಗೆ ಜನರು ಬರುತ್ತಿದ್ದರು. ಹಾಗೇ ಒಮ್ಮೆ ರೈತನೊಬ್ಬ ಮತ್ತೊಬ್ಬ ರೈತನಿಂದ ಒಂದು ಬಾವಿಯನ್ನು ಖರೀದಿಸಿದ್ದ.ಆ ಬಾವಿಯನ್ನು ಕೊಳ್ಳಲು ಹಣ ಕೊಟ್ಟಿದ್ದರೂ ಮತ್ತೆ ನೀರಿಗೂ ಹಣ ಕೊಡು ಎಂದು ಹಟ ಮಾಡುತ್ತಿದ್ದ ಆ ಮತ್ತೊಬ್ಬ.ಆಗ ರಾಜ ಅಕ್ಬರ್ ಇದಕ್ಕೆ ತಕ್ಕ ನ್ಯಾಯ ಬೀರಬಲ್ಲನೇ ಕೊಡಬಲ್ಲನೆಂದು ಆತನನ್ನು ಕರೆಸಿದ.ಬೀರಬಲ್ ಕೊಂಚ ಸಮಯ ಯೋಚಿಸಿ "ಅಯ್ಯಾ ನೀನು ಬಾವಿಯನ್ನು ಮಾರಿದೆ ಎಂದು ಹೇಳಿದೆ,ಹಾಗಾದರೆ ಬಾವಿ ಮಾತ್ರ ಆತನಿಗೆ ಸೇರಿದೆ,ನೀರು ನಿನ್ನದು ಇಷ್ಟು ದಿನ ಆ ನೀರನ್ನು ಆತ ತನ್ನ ಬಾವಿಯಲ್ಲಿ ಇಟ್ಟುಕೊಂಡಿದ್ದಕ್ಕೆ ನೀನೇ ಬಾಡಿಗೆ ಕೊಡಬೇಕು,ಇಲ್ಲವೇ ನೀರನ್ನು ಮಾತ್ರ ವಾಪಸ್ ತೆಗೆದುಕೋ"ಎಂದು ಬುದ್ಧಿವಂತಿಕೆಯ ಮಾತನ್ನಾಡಿದ.ಆ ಮಾತನ್ನು ಕೇಳಿ ಆ ಕುಹಕ ಬುದ್ಧಿಯ ರೈತ ತಲೆಬಾಗಿ ಕ್ಷಮೆ ಯಾಚಿಸಿದ. ▪

ಹಾಗಲಕಾಯಿ ಗೊಜ್ಜು

ಬೇಕಾಗುವ ಸಾಮಗ್ರಿಗಳು

- ಎರಡು ಹಾಗಲಕಾಯಿ
- ಹುಣಸೇಹಣ್ಣು ನಿಂಬೇಗಾತ್ರ
- ಎರಡು ಚಮಚ ಉಪ್ಪು
- ಬೆಲ್ಲ ಹತ್ತು ಗ್ರಾಂ
- ಮೆಣಸಿನ ಪುಡಿ ಎರಡು ಚಮಚ
- ವಗ್ಗರಣೆಗೆ ಸ್ವಲ್ಪ ಎಣ್ಣೆ, ಕರಿಬೇವು,ಸಾಸಿವೆ,ಎರಡು ಒಣಮೆಣಸಿನಕಾಯಿ

ಮಾಡುವ ವಿಧಾನ

- ಹಾಗಲಕಾಯನ್ನು ತೊಳೆದು,ಬೀಜ ತೆಗೆದು,ಸಣ್ಣ ಚೂರುಗಳನ್ನಾಗಿ ಕತ್ತರಿಸಿಕೊಳ್ಳಿ
- ಒಂದು ಬಾಣಲೆಗೆ ವಗ್ಗರಣೆ ಹಾಕಿ ಅದಕ್ಕೆ ಹಾಗಲಕಾಯನ್ನು ಹಾಕಿ ಚೆನ್ನಾಗಿ ಹುರಿಯಿರಿ
- ಅದೇ ಸಮಯದಲ್ಲಿ ನೆನೆಸಿದ್ದ ಹುಣಸೇನೀರಿಗೆ ಬೆಲ್ಲ, ಮೆಣಸಿನ ಪುಡಿ ಸೇರಿಸಿ ಬಾಣಲೆಗೆ ಹಾಕಿ
- ಎರಡು ನಿಮಿಷ ಕುದಿಸಿ.ಕೆಳಗಿಳಿಸಿ,ಆರಿದ ನಂತರ ಬಡಿಸಿ
- ಮತ್ತೆ ಒಂದು ಗಂಟೆ ಫ್ರಿಡ್ಜ್ ನಲ್ಲಿಟ್ಟು ತಿನ್ನಲು ಕೊಡಿ

ಇನ್ನೂ ನೂರಾರು ರೆಸಿಪ್ಪಿಗಳಿಗೆ **www.sugamakannada.com** ಗೆ ಭೇಟಿಕೊಡಿ.

ರೆಸಿಪಿ ಕೊಡ್ತೀರಾ!

ಒಗಟು

೧. ಬಿಳೀ ಕಲ್ಮೇಲೆ ಕರಿಕಲ್ಲು , ಕರೀ ಕಲ್ಮೇಲೆ ರಂಗೋಲೆ

೨. ಗಿರಿರಾಜನ ಮಗಳ ಗಂಡನ ಹಿರಿ ಮಗನ ತಮ್ಮನ ವಾಹನ

ಉತ್ತರಕ್ಕೆ ಪುಟ ೧೩ ನೋಡಿ

ಮನ ಮೋಹನ ...

ಯಮುನ ತೀರದಲಿ ಸುಮನ ಕೃಷ್ಣನ್ನ
ವರಿಸದವಳು ಯಾರೆ
ತರುಣ ಯಾದವಗೆ ಕಣ್ಣ ನೀರನ್ನ
ಸುರಿಸದವಳು ಯಾರೆ

ಅಂದ ಮೂರುತಿ ನಂದ ಹರಿಯನ್ನ
ಬಳಸದವಳು ಯಾರೆ
ಸುಂದರಾಂಗನ ಅಂಗ ಸಂಗವನು
ಬಯಸದವಳು ಯಾರೆ

ಮುದ್ದು ಗೋಪನಿಗೆ ಮುದ್ದೆ ಬೆಣ್ಣೆಯನು
ಉಣಿಸದವಳು ಯಾರೆ
ಶುದ್ಧ ಮನಸಿನ ತಿದ್ದ ತಿಲಕನಿಗೆ
ಸೆಣಸದವಳು ಯಾರೆ

ಕೊಳಲ ಮಾಧವಗೆ ತನ್ನ ಅಳಲನ್ನ
ಹೇಳದವಳು ಯಾರೆ
ಕೊರಳ ಕೊಂಕಿಸುತ ತರಳ ಮೋಹನನ
ಕೇಳದವಳು ಯಾರೆ

ತುಂಬು ಚಂದಿರನ ಹೊಂಬೆಳಕಿನಲಿ
ಮೀಯದವಳು ಯಾರೆ
ಗೊಂಬೆಯಂತಿರುವ ಜಂಭ ಮದನನಿಗೆ
ನೋಯದವಳು ಯಾರೆ

ಚೆಲುವ ರಾಯನಿಗೆ ಒಲವ ಮಾಲೆಯನು
ಹೊರೆಸದವಳು ಯಾರೆ
ಕೊಳಲ ಮುರಳಿಗೆ ಇರುಳ ದೀಪವನು
ಉರಿಸದವಳು ಯಾರೆ

-ಮಾಲು, ಅಡಿಲೈಡ್

ಜಾಣ ಕರ್ನಾಟಕ

೧. ವಿಶ್ವವಿಖ್ಯಾತ ಮೈಸೂರು ಅರಮನೆಯ ಹೆಸರೇನು? ಇದರ ವಿನ್ಯಾಸ ಯಾವ ಶೈಲಿಯಲ್ಲಿದೆ? ಇದರ ವಿನ್ಯಾಸಕಾರರು ಯಾರು?

೨. ಈ ಅರಮನೆ ನಿರ್ಮಾಣವಾದ ಸಮಯ ಯಾವುದು? ಇದಕ್ಕೆ ಆ ಸಮಯದಲ್ಲಿ ತಗುಲಿದ ವೆಚ್ಚ ಎಷ್ಟು?

ಸರಿ ಉತ್ತರಕ್ಕೆ ಪುಟ ೨೧ ನೋಡಿ

ಒಗಟು – ಉತ್ತರ

೧. ಕಣ್ಣು ೨. ನವಿಲು

ಹಾಸ್ಯ ಚಿಲುಮೆ

ವಿದ್ಯಾರ್ಥಿ ಕೇಳಿದ "ಏನ್ಸಾರ್ ಇದು"
ಟೀಚರ್ "ಪ್ರಶ್ನೆ ಪತ್ರಿಕೆ" ..... ಇದು .....ಉತ್ತರ ಪತ್ರಿಕೆ

ಇದೇನ್ ಸಾರ್ ಅನ್ಯಾಯ?.....
ಯಾಕಪ್ಪಾ?.....
ಪ್ರಶ್ನೆ ಪತ್ರಿಕೆಯಲ್ಲಿ ಎಲ್ಲಾ ಬರೆದಿದೆ, ಆದ್ರೆ ಉತ್ತರ ಪತ್ರಿಕೆಯಲ್ಲಿ ಏನು ಇಲ್ವಲ್ಲಾ!

ಮತ್ತಷ್ಟು ಹಾಸ್ಯಕ್ಕೆ ಭೇಟಿ ಕೊಡಿ – ಸುಗಮ ಕನ್ನಡ ಕೂಟ

ಪದ-ಪುಂಜ (ಶಾನೆ ತಲೆ ಕೆಡಿಸ್ಕೋಬೇಡಿ)

ಕೆಳಕಂಡ ವಾಕ್ಯಕ್ಕೆ ಅರ್ಥಬರುವಂತೆ ಬಿಟ್ಟ ಜಾಗ ತುಂಬುವ ಹಾಗೆ ಉತ್ತರ ಹುಡುಕಿ

೧. ನೆಹರೂರವರಿಗೆ ತಮ್ಮ ಹುಟ್ಟುಹಬ್ಬವನ್ನು ಇವರ ಹೆಸರಿನಲ್ಲಿ ಮಾಡುವಾಸೆ.

೩. ಬಹುಕೃತ ವೇಷಕ್ಕೆ ಕಾರಣವಾಗಿರುವ ಉದರವನ್ನು ಹೀಗೂ ಕರೆಯಬಹುದು.

೩.ಒಂದು ಸಂಪೂರ್ಣದಲ್ಲಿ ಇರುವ ನಾಲ್ಕನೇ ಒಂದಂಶ.

೪.ಇವನು ಮೂಡಿದಾಗ ಅಂಬರದಲ್ಲಿ ಚೆಲ್ಲಾಡಿತು ಓಕುಳಿ.

೫. ಹಂತಹಂತವಾಗಿ ಮೇಲೇರಲು ಸಹಕರಿಸಿದ್ದು.

೬. ಬೆಂಗಳೂರು ನಿರ್ಮಾತೃ ಕೆಂಪೇಗೌಡರ ಹೆಸರಿನ ಹಿಂದೆ ಈ ನಾಮಧೇಯವೇ ಮೊದಲು.

ಉತ್ತರ: ನಮ್ಮದಲ್ಲದ ಊರಿನ ಈ ಬುಗ್ಗೆ ಬಲು ಸೊಗಸು.

ನಿಮ್ಮ ಉತ್ತರ ಈಮೈಲ್ ಮಾಡಿ, (horanadachilume@gmail.com)

ಜೂನ್ ೩೦ ತಮ್ಮ ಉತ್ತರ ಕಳುಹಿಸಲು ಕಡೆಯ ದಿನಾಂಕ.

ಮೇ ಪದ ಪುಂಜ – ಉತ್ತರ

ಕಳೆದ ತಿಂಗಳ ಪದ ಪುಂಜಕ್ಕೆ ಉತ್ತರಿಸಿದವರು

- ಬಿ.ಆರ್.ವತ್ಸಲ ದ್ವಾರಕನಾಥ್, ಕೆ.ಜಿ.ಎಫ್
- ಬಿ.ಆರ್.ಪುಷ್ಪವಲ್ಲಿ ಚಂದ್ರಶೇಖರ್, ಕೆಂಗೇರಿ ಉಪನಗರ
- ರಾಘವೇಂದ್ರ ಮೂರ್ತಿ, ಬೆಂಗಳೂರು
- ವೆಂಕಟೇಶ್ ಮೂರ್ತಿ, ಚಿತ್ರದುರ್ಗ
- ರಾಜೇಶ್ವರಿ, ಸಿದ್ದಿ
- ಸುಮ ಅಶೋಕ್

ಮೇ ತಿಂಗಳ ಪದಪುಂಜದ ಉತ್ತರ

೧. ಧಾರೆ ಮುಗಿದಾದ ಮೇಲೆ ಗಂಡು ಹೆಣ್ಣಿನ ಕಡೆಯವರಿಬ್ಬರೂ ಉರುಳಾಡದೆ. ಹೂವಿನ ಚೆಂಡು ಬಳಸಿ ನಡೆಸುವ ಕಲಾಪ.

ಉ	ರು	ಟ	ಣೆ

೨. ಮದುವೆಗಳ ಕಾಲದಲ್ಲಿ ಜರಿ ಸೀರೆಗಳ ಅಂಗಡಿಗಳಲ್ಲಿ ವ್ಯಾಪಾರವಾಗುವ ಪರಿ.

ಭ	ರ್ಜ	ರಿ

೩. ಕಬ್ಬಿಣ ಮತ್ತು ಚಿನ್ನವು ಗುಣ, ಬೆಲೆಗಳಲ್ಲಿ ಅಪಾರ ವ್ಯತ್ಯಾಸವಾದರೂ, ಜಾತಿ ಮಾತ್ರ ಒಂದೇ.

ಲೋ	ಹ

೪. ಬೇರೆಯವರ ಪಾಲೇನೂ ಆಗಿಲ್ಲ ಅವನು, ಮೈಮರೆತಿದ್ದಾನಷ್ಟೇ.

ಪ	ರ	ವ	ಶ

೫. ಕೂತು ತಿಂದರೆ ಸಾಲದಾಗುವ ಹಣ ಯಾವುದರಲ್ಲಿದೆ?

ಕು	ಡಿ	ಕೆ

೬. ಯುಧಿಷ್ಠಿರನನ್ನು ಪರೀಕ್ಷಿಸಲು ಪ್ರಶ್ನೆ ಕೇಳಿದಾತ.

ಯ	ಕ್ಷ

ಉತ್ತರ: ಎರಡೂ ಕಡೆಗಳಲ್ಲಿ ಸೌಖ್ಯವೆಂದು ಪತ್ರಗಳಲ್ಲಿ ಒಕ್ಕಣೆ ಮಾಡುತ್ತಿದ್ದ ಈ ಸಂಪ್ರದಾಯ.ಅಳಿಸಿ ಹೋಗುತ್ತಿದೆಯೇ

ಉ	ಭ	ಯ	ಕು	ಶ	ಲೋ	ಪ	ರಿ	

ರಂಗೋಲಿ ಬುಕ್

ನಿಮ್ಮ ರಂಗೋಲಿ ಇಲ್ಲಿ ಕಾಣಬೇಕೇ? ಇ-ಮೇಲ್ ಮಾಡಿ: horanadachilume@gmail.com

ಮತ್ತಷ್ಟು ರಂಗುರಂಗಿನ ರಂಗೋಲಿ ಮುಂದಿನ ಸಂಚಿಕೆಯಲ್ಲಿ

ರಂಗವಲ್ಲಿ

ಭಾರತೀಯ ಸಂಸ್ಕೃತಿಯಲ್ಲಿ, ನಿಯಮಪ್ರಕಾರ ಮಾಡುವ ಅನೇಕ ಕಾರ್ಯಗಳಲ್ಲಿ ರಂಗೋಲಿ ಬಿಡಿಸುವುದೂ ಒಂದು. ಸಾಮಾನ್ಯವಾಗಿ ಮನೆಯ ಹೆಣ್ಣು ಮಕ್ಕಳು ತಮ್ಮ ದೈನಂದಿನ ಚಟುವಟಿಕೆಯ ಒಂದು ಅಂಗವಾಗಿ ರಂಗೋಲಿ ಹಾಕುವುದನ್ನು ರೂಢಿಸಿಕೊಂಡಿರುತ್ತಾರೆ. ಮನೆಯ ಮುಂದೆ ರಂಗೋಲಿ ಇದ್ದರೆ ಅದೆಷ್ಟು ಲಕ್ಷಣ!

ಕೇವಲ ಸಂಸ್ಕೃತಿ ಅಷ್ಟೇ ಅಲ್ಲದೆ, ರಂಗೋಲಿ ಬಿಡಿಸುವುದರಿಂದ, ರೇಖಾ ಗಣಿತ ಉತ್ತಮಪಡಿಸಿಕೊಳ್ಳುವಲ್ಲಿ ಸಹಕಾರಿ. ಅದೆಷ್ಟು ಚುಕ್ಕಿಗಳು, ಎಂತೆಂತಹ ರೇಖೆಗಳು, ತರಹಾವರಿ ನಮೂನೆಗಳು. ಅಬ್ಬ! ರಂಗೋಲಿ ನಿಮಗೆ ಬೆರಗು ಮಾಡಿಲ್ಲವೇ? ಒಮ್ಮೆ ರಂಗೋಲಿಯಲ್ಲಿ ಕೈ ಆಡಿಸಿ ನೋಡಿ, ಒಂದು ಕಾವ್ಯವೇ ಹುಟ್ಟೀತು ... ▪

ರಚನೆ: ಶ್ರೀಮತಿ ವತ್ಸಲಾ ದ್ವಾರಕಾನಾಥ್, ಕೆ.ಜಿ.ಎಫ್

ಅಸಾದುಲ್ಲ ಬೇಗ್ ಅವರ ಶಾಯರಿಗಳು

ಮರೆಮಾಚಿದರು

ಮರೆಮಾಚಿದರು,
ನನ್ನಿಂದಲೇ
ನಿನ್ನ ದೂರು.

ನೀನೆಷ್ಟೇ
ನಗು-ನಗುತ್ತಿದ್ದರೂ
ಸಾರುತಿದೆ
ಇನ್ನೊಂದು ಕಥೆ
ಜರಿಸದೇ
ಹಿಡಿದಿಟ್ಟ ಕಣ್ಣೀರು !

ಸ್ನೇಹ-ಪ್ರೇಮ

ಕೈಗದ ಕೊಡುವುದು
ಕೊಟ್ಟಿದ್ದಕ್ಕೆ ಲೆಕ್ಕವಿಡುವುದು
ಮಾಡಲೇಬಾರದು ಸ್ನೇಹದಲ್ಲಿ

ಅತ್ತು ಅಳಿಸುವುದು
ಸತ್ತು ಸಾಯಿಸುವುದು
ಎಲ್ಲವೂ ಮಾನ್ಯ ಪ್ರೇಮದಲ್ಲಿ



ದೆವ್ವತ್ತಿ ಮರ

ಲೇಖಕರು:
ನಾಗಶೈಲ ಕುಮಾರ್

ಸುಂದರ ಗ್ರಾಮೀಣ ಪರಿಸರ, ಹೊಲ, ತೋಟ, ಗದ್ದೆ, ಕೆರೆ ಎಲ್ಲವೂ ಇತ್ತು. ಆ ಊರಿಗೆ ಹೋಗಿ ಬಂದರೆ ಸಂತೋಷವೆನ್ನುವುದು ಅಪ್ಪಿ ಬರುತ್ತಿತ್ತು. ಇವೆಲ್ಲದರ ನಡುವೆ, ನನ್ನನ್ನು ಬಹಳವಾಗಿ ಕಾಡಿದ ದೆವ್ವತ್ತಿ ಮರವೂ ಇತ್ತು. ಇದರ ಸುತ್ತ ಹೆಣೆದ ಕಥೆಯಿದು. ಎರಡು ಕಂತಾಗಿ ನಿಮ್ಮ ಓದಿಗೆ ಬರುತ್ತಿದೆ.

ಭಾಗ – ೧ ...

ಅಜ್ಜೀ ನಾನು ವಾಕಿಂಗ್ ಹೋಗಿ ಬರ್ತೀನಿ, ನಾನು ಬಂದ ಮೇಲೆ ಉಗ್ರಾಣ ಕ್ಲೀನ್ ಮಾಡಿಕೊಡ್ತೀನಿ. ಆಮೇಲೆ ನೀನೆ ಮಾಡಿಬಿಡಬೇಡ. ನನಗೆ ಆ ವಾಡೆ ಒಳಗೆ ಇಳಿಯಕ್ಕಿಷ್ಟ, ಗೊತ್ತಾಯ್ತಾ?", ಒಲೆಯ ಮೇಲಿಟ್ಟಿದ್ದ ಗಿಣ್ಣು ಹಾಲಿಗೆ ಅವಲಕ್ಕಿ ಬೆರೆಸಿ ತಳ ಹಿಡಿಯದಂತೆ ತಾಳ್ಮೆಯಿಂದ ಗೋಟಾಯಿಸುತ್ತಿದ್ದ ಅಜ್ಜಿಗೆ ಹೇಳಿದೆ.

"ಅಲ್ಲಪ್ಪೆ, ನಾಳೆ ಅವರೆಲ್ಲ ಬಂದ್ಮೇಲೆ ನಿಮ್ದು ತಿರುಗಾಟ ಇದ್ದೇ ಇರುತ್ತೆ, ಇವತ್ತೊಂದು ದಿನ ಮನೇಲಿ ಇರಬಾರ್ದೆ?, ಹಿತ್ಲು, ಆಲೆಮನೆ, ಮಾವಿನ ತೋಪು, ಕಾಲುವೆ ಅದೂ ಇದೂ ಅಂತ ಬೆಳಗ್ನಿಂದ ಸಂಜೇವರ್ಗೂ ಸುತ್ತುತಾನೆ ಇರ್ತೀಯ. ಒಂದರ್ಧ ಘಂಟೆ ನಿರಾಳ್ವಾಗಿ ಮನೇಲಿ ಕೂತ್ಕೋಬಾರ್ದೆ? ಎಲ್ಲಿ ಉಗ್ರಾಣದಲ್ಲಿ ನಿಮ್ತಾತ ಯಾವುದೋ ಡಬ್ಬದಲ್ಲಿ ಏಲಕ್ಕಿ, ಪಚ್ಚಕರ್ಪೂರ ಎಲ್ಲಾ ಇಟ್ಟಿದ್ದಾರೆ, ಹಾಗೆ ಸ್ವಲ್ಪ ತೆಕ್ಕೊಟ್ಟು ಬಿಡಪ್ಪೆ", ಹೊಗೆಯಾಡುತ್ತಿದ್ದ ಒಲೆಯನ್ನು ಉದುಗೊಳವೆಯಿಂದ ಉದುತ್ತಾ ಅಜ್ಜಿ ನುಡಿದರು.

ಬಾಗಿಲಿಗೆ ಕಟ್ಟಿದ್ದ ಪರದೆಯನ್ನು ಸರಿಸಿ ಉಗ್ರಾಣದೊಳಗೆ ನಡೆದೆ. ಒಂದು ನಿಮಿಷ ಕಣ್ಣಿಗೆ ಏನೂ ಕಾಣದಾಗಿತ್ತು. ಘಮ್ಮೆಂದು ಹೊಸ ಬೆಲ್ಲದ ವಾಸನೆ ಮೂಗಿಗೆ ಅಡರಿತು. ನಿಧಾನವಾಗಿ ಅಲ್ಲಿನ ಮಂದ ಬೆಳಕಿಗೆ ಹೊಂದಿಕೊಂಡ ಕಣ್ಣಿಗೆ ಮೊದಲು ಕಂಡದ್ದೇ ಬೆಲ್ಲ ತುಂಬಿಸಿಟ್ಟ ಮಡಕೆ. ಹಿಂದಿರುಗಿ ನೋಡಿ ಅಜ್ಜಿ ನನ್ನ ಕಡೆ ನೋಡುತ್ತಿಲ್ಲವೆಂದು ಖಾತರಿ ಪಡಿಸಿಕೊಂಡು ಒಂದು ದಪ್ಪ ಬೆಲ್ಲದುಂಡೆಯನ್ನು ಬಾಯಿಗೆ ತುರುಕಿಕೊಂಡೆ, ಏಲಕ್ಕಿ ಸಿಗಲಿಲ್ಲ. ಮತ್ತೊಂದು ಡಬ್ಬದೊಳಗೆ ಕೈ ಹಾಕಿದೆ. ಚಪ್ಪಟೆಯಾದ ಅಗಲನೆಯ ಬಿಲ್ಲೆಗಳು ಸಿಕ್ಕಿದವು, ತೆಗೆದು ನೋಡಿದೆ, ತಾತ ಹಿಂದಿನ ದಿನ ಆಲೆಮನೆಯಲ್ಲಿ ಹಾಕಿಸಿ ತಂದಿಟ್ಟಿದ್ದ ಪಾಕನಪೊಪ್ಪು. ಕಡಲೆಬೀಜ, ಕಡಲೆಪೊಪ್ಪು, ಒಣಕೊಬ್ಬರಿಯ ತುಂಡುಗಳನ್ನು ಸೇರಿಸಿ ಮಾಡಿದ್ದ ಅದರ ನಾಲ್ಕಾರು ಬಿಲ್ಲೆಗಳನ್ನು ಚಡ್ಡಿಯ ಜೋಬಿನಲ್ಲಿ ತುರುಕಿಕೊಂಡೆ. ಮುಂದಿನ ಡಬ್ಬದಲ್ಲಿ ಏಲಕ್ಕಿ ಸಿಕ್ಕಿತು.

ಅಲ್ಲಿದ್ದ ಎಲ್ಲ ಡಬ್ಬಗಳಲ್ಲೂ ಕೈಯಾಡಿಸುತ್ತ ಏಲಕ್ಕಿಯನ್ನು ಹುಡುಕತೊಡಗಿದೆ. ರಾಗಿ, ಭತ್ತ, ಜೋಳ ಮುಂತಾದವುಗಳ ವಾಡೆಗಳೊಡನೆ ಬೆಲ್ಲಗಳ ಮೂಟೆಗಳು, ಮತ್ತು ಪುರಿ ಉಂಡೆ, ಪುಳ್ಳಂಗಾಯಿ ಉಂಡೆ, ಪುರಿ ಬತ್ತಾಸು, ಮುಂತಾದ ತಿಂಡಿಗಳು ಕೂಡ ಉಗ್ರಾಣದಲ್ಲಿ ನೆಲೆಯಾಗಿದ್ದವು.

ಯಾವುದರೊಳಗೆ ಕೈ ಹಾಕಿದರೂ ಜೊತೆಗೆ ಉಚಿತವಾಗಿ ಚೇಳುಗಳು, ಜರಿ(ಸಹಸ್ರಪಾದಿ) ಮಂಡರಗಪ್ಪೆ ಗಳು ಕೂಡ ಸಿಗುವ ಸಾಧ್ಯತೆಗಳು ಯಥೇಚ್ಚವಾಗಿತ್ತು.

ಅಷ್ಟು ಹೊತ್ತಿಗಾಗಲೇ ಅಜ್ಜಿ ನಾಲ್ಕಾರು ಬಾರಿ ಏಲಕ್ಕಿ ಸಿಕ್ಕಿತೇ ಎಂದು ಕೇಳಿಯಾಗಿತ್ತು, ಉತ್ತರಿಸಲು ಬಾಯಿಗೆ ಬಿಡುವೇ ಇರಲಿಲ್ಲ.

ಯಾಕೋ ಉತ್ತರವೇ ಬರುತ್ತಿಲ್ಲವೆಂದು ಅಜ್ಜಿ ನನ್ನ ಕಡೆ ನೋಡಿ " ಒಹೋ ಬಾಯ್ತುಂಬ ಬೆಲ್ಲ ತುಂಬ್ಕೊಂಡು ಹನ್ಮಂತ್ರಾಯನ್ ಮೂತಿ ಆಗಿದೆ. ಅದಕ್ಕೆ ರಾಯರದು ಸದ್ದೇ ಇಲ್ಲ. ಅದೆಷ್ಟು ಬೆಲ್ಲ ತಿನ್ನೋದು, ಹೊಟ್ಟೇಲಿ ಜಂತು ಬೀಳತ್ತಷ್ಟೆ. ಬಾಯಿ ಮಾತ್ರ ಅಲ್ಲ, ನಿಕ್ಕರ್ ಜೋಬುಗಳು ಕೂಡ ಉದ್ಕೊಂಡ ಹಾಗಿದೆ..."

"ಅಜ್ಜಿ ನಾನು ವಾಕಿಂಗ್ ಹೋಗ್ಬರ್ತೀನಿ, ಹೊತ್ತಾಗ್ತಿದೆ" ಅಜ್ಜಿಗೆ ಮಾತು ಮುಂದುವರೆಸಲು ಅವಕಾಶ ಕೊಡದೆ, ಕಷ್ಟಪಟ್ಟು ತೊದಲುತ್ತಾ, ಏಲಕ್ಕಿ ಪೊಟ್ಟಣವನ್ನು ಅಜ್ಜಿಯ ಮುಂದಿಟ್ಟು ಹೊರಗೆ ಓಡಿದೆ.

****

ಊರಿನ ಮುಖ್ಯ ಬೀದಿಯಲ್ಲಿ ಸದಾ ಬಾಗಿಲು ಹಾಕಿಕೊಂಡೇ ಇರುತ್ತಿದ್ದ ಆಂಜನೇಯನಿಗೆ ಭಯಭಕ್ತಿಯಿಂದ ನಮಸ್ಕರಿಸಿ ಶಕ್ತಿ ಧೈರ್ಯಗಳ ಕೊಡಪ್ಪ ಅಂತ ಕೇಳಿಕೊಳ್ಳುತ್ತಾ ಊರ ಮುಂದಕ್ಕೆ ನಡೆದೆ.

ಗ್ರಾಮ ಪಂಚಾಯ್ತಿ ಹಾಲ್, ಪಶುವೈದ್ಯ ಶಾಲೆ ಮತ್ತು ಯುವಕ ರೈತರ ಸಂಘ ಒಂದು ಬದಿಗಾದರೆ ಮತ್ತೊಂದು ಬದಿಗೆ ಪೆಟ್ಟಿಗೆ ಅಂಗಡಿ, ಹಿಟ್ಟಿನ ಗಿರಣಿ ಇದ್ದವು.ಅವುಗಳ ದಾಟಿ ಮುನ್ನಡೆದರೆ, ಎಡಬದಿಗೆ ಕೆರೆ ಆರಂಭವಾಗುತ್ತಿತ್ತು. ಬೃಹದಾಕಾರವಾದ ಆಲದ ಮರ, ಕೆಳಗೆ ಕೆರೆಗೆ ಇಳಿಯಲು ಮೆಟ್ಟಿಲುಗಳಿದ್ದವು. ಸಾಧಾರಣವಾಗಿ ಅದು ಬೇಸಗೆಯ ಸಮಯವಾಗಿದ್ದು ಕೆರೆಯಲ್ಲಿ ಕಾಲು ಭಾಗ ಮಾತ್ರ ನೀರಿದ್ದು, ನಡುನಡುವೆ, ಮೊಸಳೆ, ನೀರಾನೆ ಇತ್ಯಾದಿ ಚಿತ್ರವಿಚಿತ್ರ ರೂಪಗಳ ಹೆಬ್ಬಂಡೆಗಳು ನೀರಿನಿಂದ ಹೊರ ಚಾಚಿರುತ್ತಿದ್ದವು. ಕೆರೆ ಸರಿಯಾಗಿ ಒಂದು ಮೈಲು ಉದ್ದವಿದ್ದು , ಉದ್ದಕ್ಕೂ ಬಸ್ಸುಗಳು ಓಡಾಡುವ ಏರಿಯಿದ್ದು, ಒಂದು ಮೈಲಿಯಾಚೆಗೆ ಕೋಡಿಯಿತ್ತು.

ಮುಂದಿನ ಪುಟ ನೋಡಿ ...

ರಸ್ತೆಯ ಮತ್ತೊಂದು ಭಾಗ ವಿಶಾಲವಾದ ಅರಳೀಮರ ಮತ್ತು ಅಶ್ವತ್ಥಕಟ್ಟೆಯಿಂದ ಪ್ರಾರಂಭವಾಗಿ, ಅಡಿಕೆ ಮತ್ತು ತೆಂಗಿನ ತೋಟಗಳು, ನಂತರ ಕಣ್ಣುಕಾಣುವಷ್ಟು ಉದ್ದಕ್ಕೂ ಕಬ್ಬಿನ ಗದ್ದೆಗಳಿಂದ ಕಂಗೊಳಿಸುತ್ತಿತ್ತು. ರಸ್ತೆಯಿಂದ ಹತ್ತು ಹದಿನೈದು ಅಡಿ ಕೆಳಗಿರುತ್ತಿದ್ದ ತೋಟ, ಗದ್ದೆಗಳಿಗೆ ಬೇಲಿಯಂತೆ ಇತ್ತು ಈಚಲ ಮರಗಳ ಸಾಲು.

ಅಲ್ಲಿನ ಸಂಜೆಯ ವಾತಾವರಣವೇ ಒಂದು ರೀತಿಯ ಮುದ ಕೊಡುತ್ತಿತ್ತು. ಹಳ್ಳಿಯ ಮನೆಗಳ ಚಿಮಣಿಗಳಿಂದ ಹೊಗೆ ತನ್ನೊಡನೆ ವಿಧವಿಧವಾದ ಮಸಾಲೆಗಳ ಕಂಪನ್ನು ಹೊತ್ತುತಂದು ಎಲ್ಲೆಡೆಗೂ ಪಸರಿಸಿತ್ತು. ದೂರದಲ್ಲೆಲ್ಲೋ ಕೇಳುತ್ತಿದ್ದ ತಮಟೆಗಳ ಸದ್ದು, ಅರಳೀಮರದ ಎಲೆಗಳು ಗಾಳಿಗೆ ತೂರಾಡಿದಾಗ ಸಾವಿರಾರು ಗೆಜ್ಜೆಗಳು ಉಲಿದಂತೆ ಕೇಳುತ್ತಿತ್ತು, ಕೆರೆಯ ನೀರು ಅಲೆಅಲೆಯಾಗಿ ಬಂದು ಎರಿಯ ಕಲ್ಲುಗಳಿಗೆ ಬಂದು ಅಪ್ಪಳಿಸಿ, ನೊರೆನೊರೆಯಾಗಿ ಹಿಂದಿರುಗುವ ಮೊರೆಲ ಲಾಲಿ ಹಾಡಿದಂತಿತ್ತು. ಹಳ್ಳಿಯೆಂದರೆ ಹೀಗಿರಬೇಕೆನ್ನುವ ಆ ಸೊಬಗಿನ ವಾತಾವರಣವನ್ನು ತನ್ಮಯನಾಗಿ ಅನುಭವಿಸುತ್ತ ನನಗೇ ತಿಳಿಯದಂತೆ ಸುಮಾರು ದೂರ ಬಂದುಬಿಟ್ಟಿದ್ದೆ.

"ಟ್ರಿಣ್ ಟ್ರಿಣ್, ಟ್ರಿಣ್ ಟ್ರಿಣ್", ಪೇಟೆಕಡೆಯಿಂದ ಸೈಕಲ್ ಮೇಲೆ ಬರುತ್ತಿದ್ದ ಅಂಗಡಿ ಮನೆಯ ಲೋಕೇಶ, "ಹಲೋ, ಹೌ ಆರ್ ಯೂ? ಯಾವಾಗ್ ಬಂದ್ರಿ ಊರಿಂದ " ಎಂದು ಬೆಲ್ ಹೊಡೆಯುತ್ತಾ ಕೇಳಿದಾಗಲೇ ನನಗೆ ಬೇರೆಯ ಕಡೆ ಗಮನ ಹರಿದದ್ದು. ನಾನು ಉತ್ತರಿಸುವ ಮುಂಚೆಯೇ ಅವರು ಎಷ್ಟೋ ದೂರ ಹೋಗಿಯೂ ಆಗಿತ್ತು.

ಆಗಲೇ ಸೂರ್ಯ ಮುಳುಗುತ್ತಿದ್ದ, ಊರಿಂದಾಚೆಗೆ ಸಾಕಷ್ಟು ದೂರ ಬಂದು ರಸ್ತೆ ನಿರ್ಜನವಾಗಿತ್ತು. ಆಗೊಮ್ಮೆ ಈಗೊಮ್ಮೆ ಸೈಕಲ್ ಮೇಲೆ ಪೇಟೆಯಿಂದ ಹಿಂದಿರುಗುವವರ ಹೊರತಾಗಿ ಮತ್ಯಾರ ಓಡಾಟವೂ ಇರಲಿಲ್ಲ. ಇನ್ನೂ ಎಷ್ಟು ದೂರ ಹೋಗಬಹುದೆಂದು ಮುಂದೆ ನೋಡಿದೆ,

ಎದುರಿಗೇ ದುತ್ತೆಂದು ಮುಗಿಲ ಸೀಳಿ ನಿಂತಿತ್ತು ದೆವ್ವತ್ತಿ ಮರ.

ಅಷ್ಟು ಹೊತ್ತೂ ಇದ್ದ ಸುಂದರ ಲೋಕವೆಲ್ಲ ಮಾಯವಾಗಿ, ಛೇ, ಇಷ್ಟು ದೂರ ಯಾಕಾದ್ರು ಬಂದೆನೋ ಎಂದುಕೊಳ್ಳುತ್ತ ಊರಿನ ಕಡೆಗೆ ತಿರುಗಿದೆ. ಈಗ ಅಕ್ಕಪಕ್ಕ ನೋಡಲೂ ಭಯವಾಗತೊಡಗಿತ್ತು. ಊರ ಆಂಜನೇಯನಿಗೆ ನಮಸ್ಕಾರ ಮಾಡಿ ಧೈರ್ಯ ಕೊಡು ಅಂತ ಕೇಳ್ಕೊಂಡಿದ್ದು ಏನೂ ಪ್ರಯೋಜನವಾಗಿರಲಿಲ್ಲ. ಓಡೊಡುತ್ತಲೇ ಊರಿನ ಹತ್ತಿರ ಬಂದೆ. ನಂತರ ಯಾರಾದರೂ ನೋಡಿ ಹೆದರಿಕೊಂಡು ಬಂದೆನೆಂದು ತಿಳಿದರೆ ಮರ್ಯಾದೆ ಹೋಗುತ್ತದೆಂದು ಬಹಳ ಧೈರ್ಯಶಾಲಿಯಂತೆ ಮನೆಗೆ ನಡೆದೆ.

****

ಸರಸರನೆ ಮಾವಿನ ಮರ ಹತ್ತಿದ್ದ ಖದಿರ. ಆ ಮರದ ಕೊಂಬೆಗಳ ಬಣ್ಣ ಮತ್ತು ಅದೇ ರೀತಿಯಲ್ಲಿ ಕಡ್ಡಿಕಡ್ಡಿಯಾಗಿ ಇದ್ದನಾದ್ದರಿಂದ ಅವನು ಎಲ್ಲಿದ್ದಾನೆಂದು ತಿಳಿಯುವುದೇ ಕಷ್ಟವಾಗಿತ್ತು. ಒಟ್ಟಿನಲ್ಲಿ ಮೇಲೆ ಹತ್ತಿ ಮಾವಿನ ಕಾಯಿಗಳನ್ನು ಕಿತ್ತು ಕಿತ್ತು ಕೆಳಗೆ ಎಸೆಯುತ್ತಿದ್ದ, ಅದೇ ನಮಗೆ ಮುಖ್ಯವಾಗಿತ್ತು. ಆರು ಜನರಿದ್ದ ನಮ್ಮ ಗುಂಪು ಒಂದೊಂದು ಕಡೆ ಒಬ್ಬೊಬ್ಬರಂತೆ ನಿಂತು ಅವನು ಎಸೆಯುತ್ತಿದ್ದ ಕಾಯಿಗಳನ್ನು ಆರಿಸಿ ಗೋಣಿಚೀಲಕ್ಕೆ ತುಂಬುತ್ತಿದ್ದೆವು. ಚೀಲ ಭರ್ತಿಯಾದ ಕೂಡಲೇ ಸಾಕು ಬಾ ಎಂದು ಕೆಳಗೆ ಇಳಿಯಲು ಹೇಳಿದೆವು. ಒಂದಷ್ಟು ಕಾಯಿಗಳನ್ನು ನಮಗೆ ಕೊಟ್ಟು ಉಳಿದದ್ದನ್ನು ಅವ್ನು ಹೊತ್ತುಕೊಂಡು ಹೊರಟ.

ಚಿತ್ರಕಾರರು: ಶ್ರೀ ಗಣೇಶ್

ಖದಿರ ಹೋದ ನಂತರ ಅಲ್ಲಲ್ಲಿ ಬಚ್ಚಿಟ್ಟಿದ್ದ ಕಾಯಿಗಳನ್ನು ಹುಡುಕಿ ತೆಗೆದು, ಕಾಲುವೆಯ ನೀರಿನಲ್ಲಿ ತೊಳೆದು, ಹುಳಿಗೊಡ್ಡಾಗಿದ್ದ ಕಾಯಿಗಳನ್ನು ಚಪ್ಪರಿಸಿ ತಿನ್ನುತ್ತಾ ತಣ್ಣನೆಯ ನೀರಿನ ಕಾಲುವೆಯಲ್ಲಿಯೇ ನಡೆದೆವು. ನಮ್ಮ ಮುಂದಿನ ಗುರಿ ಕಬ್ಬಿನ ತೋಟ. ತಾತನದೇ ತೋಟವಾದ್ದರಿಂದ ಯಾವ ಮುಲಾಜೂ ಇಲ್ಲದೆ ಒಬ್ಬೊಬ್ಬರೂ ತಮಗೆ ಬೇಕಾದಷ್ಟು ಕಬ್ಬಿನ ಜಲ್ಲೆಗಳನ್ನು ಮುರಿದುಕೊಂಡು ತಿನ್ನುತ್ತಾ ಎರಿಯ ಮೇಲಕ್ಕೆ ಬಂದೆವು. ಆಗಲೇ ಕೆರೆಯ ಅರ್ಧದಷ್ಟು ದೂರ ಬಂದುಬಿಟ್ಟಿದ್ದೆವು.

ಆಗಲೇ ಕಣ್ಣಿಗೆ ದುತ್ತೆಂದು ಬಿತ್ತು ಆ ದೆವ್ವತ್ತಿಮರ.

ಮುಂದಿನ ಪುಟ ನೋಡಿ ...

ಯಾರಿಗೂ ಅರಿವಾಗದಂತೆ ಮೆತ್ತಗೆ ಗುಂಪಿನಲ್ಲಿ ಮತ್ತೊಂದು ತುದಿಗೆ ಬಂದುಬಿಟ್ಟೆ. ದೆವ್ವತ್ತಿಮರ ನನ್ನ ಕಡೆಗೆ ಇರದಂತೆ. ನನ್ನ ಕಣ್ಣಿಗೆ ಕಾಣದಂತೆ.

ಎಲ್ಲರೂ ನನ್ನಂತೆಯೇ ಇರಬೇಕಲ್ಲ!

ನಮ್ಮ ಗುಂಪಿನಲ್ಲಿ ಹೊಸಬ ಬಳೇಪೇಟೆಯ ಸೀನ, ಅವನಿಗೆ ಆ ಮರವನ್ನು ತೋರಿಸುತ್ತಾ ಪ್ರಕಾಶಿ ಹೇಳಿದ, " ನೋಡಮ್ಮ ನಾನು ಯಾವಾಗ್ಲು ನಿನ್ನ ಹತ್ರ ಹೇಳ್ತಿರ್ತಿದ್ನಲ್ಲ, ನಮ್ಮೂರಲ್ಲಿ ದೆವ್ವದ್ದು ಒಂದು ಮರ ಇದೆ ಅಂತ, ಅದೇನೆ ಇದು, ದೆವ್ವತ್ತಿ ಮರ".

ಎಲ್ಲ ಮರಗಳ ನಡುವೆ ಒಬ್ಬಂಟಿಯಂತೆ ನಿಂತಿದ್ದ ಆ ಮರವನ್ನು ತೋರಿಸುತ್ತಾ.

"ಎಲ್ಲೋ ಇದೆ ಅತ್ತಿ ಮರ. ಬರಿ ಯಾವ್ದೋ ಒಂದು ಅರ್ಧಂಬರ್ಧ ಸುಟ್ಟಿರೋ ಮರ ಇದೆ ಅಷ್ಟೆ, ನಾನು ಮೊದಲ್ನೆ ಸಲ ಬರ್ತಿರೋದು ಅಂತ ಓಳು ಬಿಡ್ಬೇಡ", ಸೀನ ನುಡಿದ.

"ಹೌದೇಳು ನೀನು ಬರ್ತೀಯಾಂತ ದೆವ್ವ ರೇಷ್ಮೆ ಸೀರೆ ಉಟ್ಕೊಂಡು ಮುಖಕ್ಕೆಲ್ಲಾ ಪೌಡ್ರು ಹಾಕ್ಕೊಂಡು ನಿಂತಿರ್ಬೇಕಿತ್ತೇನೊ?", ಪ್ರಕಾಶಿ ಹೇಳಿದ.

ಅವನ ತಮ್ಮ ವೆಂಕಟೇಶ " ನೋಡಿದ್ರೆ ಅನ್ನಿಸೋದಿಲ್ವ ನಿಂಗೆ ಅದು ದೆವ್ವ ಇದ್ದ ಹಾಗಿದೆ ಅಂತ. ಅದ್ರ ಮುಖ ಇರೋ ಜಾಗಾನೆ ಸರಿಯಾಗಿ ನೋಡು. ಕಣ್ಣು, ನಾಲಿಗೆ ಎಲ್ಲಾ ಈಚೆ ಚಾಚಿರೋದು ಗೊತ್ತಾಗುತ್ತೆ" ಎಂದು ಒಗ್ಗರಣೆ ಹಾಕಿದ.

ಸೀನಂಗೆ ಏನು ಗೊತ್ತಾಯಿತೋ ಇಲ್ವೋ ನಂಗಂತು ನಡುಕ ಶುರುವಾಗಿತ್ತು. ಸುಮ್ನೆ ಇರಬಾರ್ದೆ ಇವರುಗಳು ಎಂದು ಬೈದುಕೊಳ್ಳತೊಡಗಿದೆ.

ಸೀನ ಮುಂದುವರೆಸಿದ " ಇದು ಹೆಸರಿಗೆ ಮಾತ್ರ ದೆವ್ವತ್ತಿ ಮರಾನೋ ಅಥ್ವಾ ದೆವ್ವದ ಚೇಷ್ಟೇನೂ ಮಾಡುತ್ತ?".

" ಇವನ್ಯಾಕೋ ನಮ್ಮಾತನ್ನ ನಂಬಲ್ಲ ಅನ್ಸುತ್ತೆ ಕಾಣ್ಸೋ, ಹೋದ್ವರ್ಷ ನೀನು ಇದೇ ಟೈಮ್ನಲ್ಲಿ ಇಲ್ಲಿಗೆ ಬಂದಿದ್ರೆ ನಿಂಗೇನೆ ಗೊತ್ತಾಗಿರೋದು, ಅಲ್ವೇನ್ಸೋ?", ಎಂದು ಹೇಳುತ್ತಾ ಪ್ರಕಾಶಿ ಎಲ್ಲರ ಮುಖ ನೋಡಿದ.

ಹೌದು ಹೌದು ಎನ್ನುತ್ತಾ ಎಲ್ಲರೂ ಗೋಣಾಡಿಸಿದೆವು.

" ಸರಿ, ಹೋದವರ್ಷ ಏನಾಯ್ತು ಅದಾದ್ರು ಹೇಳು", ಸೀನ ಕೇಳಿದ.

"ಊರಿಂದ ಪೇಟೆ ಕಡೆಗೆ ಹೋಗ್ತಾ ಇದ್ದ್ ಸೀಮೆ ಎಣ್ಣೆ ಗಾಡಿ, ಅಂದ್ರೆ ಅದೇ ನಮ್ಮ ವಿಜಯಲಕ್ಷ್ಮಿ ಮೋಟಾರ್ ಸರ್ವೀಸು (ಆ ಗಾಡಿ ವಿಪರೀತ ಹೊಗೆ ಉಗುಳಿಕೊಂಡು ಹೋಗುತ್ತಿದ್ದುದರಿಂದ ಆ ಬಸ್ಸನ್ನು ಸೀಮೆ ಎಣ್ಣೆಯಲ್ಲಿ ಓಡಿಸುತ್ತಾರೆಂದು ನಮ್ಮ ಊಹೆ) ಈ ಮರದ ಹತ್ತಿರ ಬಂದ ತಕ್ಷಣ ಎಡಕ್ಕೆ ಹೊರಳಿಕೊಂಡು ಕೆರೆ ಒಳಕ್ಕೆ ಬಿದ್ದೋಗಿತ್ತು".

"ಆ ಬಸ್ಸು ಕೆರೆಗೆ ಬೀಳೋದಕ್ಕು, ಈ ಮರಕ್ಕೂ ಏನು ಸಂಬಂಧ?".

"ಅಲ್ಲೆ ಇರೋದು ನೋಡು, ಆ ಬಸ್ಸಲ್ಲಿ ಸುಮಾರು ಜನ ಇದ್ರಂತೆ. ಎಲ್ಲಾ ನೀರಲ್ಲಿ ಮುಳ್ಗೋಗಿದ್ದಾರೆ. ಡ್ರೈವರ್ ಮಾತ್ರ ಬದುಕಿದ್ದ. ಅವನನ್ನ ನೀರಿಂದ ಈಚೆ ತೆಗೆದೋರ ಹತ್ರ ಅ ಮರಾನ ಮತ್ತೆ ಕೆರೇನ ತೋರಿಸಿ ಏನೋ ಹೇಳಿದ್ನಂತೆ. ಆ ಮೇಲೆ ಗೊತ್ತಾಯ್ತು ಆ ಮರದ ಕಡೆಯಿಂದ ಯಾರೋ ಬಸ್ಸನ್ನ ಬಲವಾಗಿ ಕೆರೆ ಕಡೆಗೆ ದಬ್ಬಿದ ಹಾಗಾಯ್ತು ಅಂತ ಅವನು ಹೇಳಿದ್ದು".

" ಓಹೋ, ಯಾವ್ದೋ ಪೈಲ್ವಾನ್ ದೆವ್ವಾನೆ ಇರ್ಬೇಕು", ಸೀನ ಇನ್ನೂ ನಂಬಿರಲಿಲ್ಲ.

ಈಗ ಪ್ರಕಾಶಿ ತಮ್ಮ ವಿಜಯನ ಸರದಿ. "ಅಷ್ಟೆಲ್ಲ ಯಾಕಮ್ಮ, ನಿಂಗೆ ನಮ್ಮ ಭಾಗತ್ತೆ ಗೊತ್ತು ತಾನೆ"

"ಯಾವ ಭಾಗತ್ತೆ ಹೇಳು?"

"ಅದೇ ಕಣಮ್ಮ ಬೇಗೂರಿನ ಭಾಗತ್ತೆ",

"ಓ ಅದೆ ನಮ್ಮ ಶೇಷ್ಮಾವನ ಹೇಂಡ್ತಿನಾ?" ಈಗ ಸೀನನಿಗೆ ಕುತೂಹಲ ಆರಂಭವಾಗಿತ್ತು, "ಅವರ್ಗೇನಾಯ್ತು, ಚೆನ್ನಾಗೇ ಇದ್ದಾರಲ್ಲ, ಯಾವಾಗ್ಲೂ ನೋಡ್ತಾನೇ ಇರ್ತೀವಲ್ಲ".

ಪ್ರಕಾಶಿ ಗಂಭೀರವಾಗಿ "ಪೂರ್ತಿ ಹೇಳೋ ತನಕ ಸ್ವಲ್ಪ ತಡ್ಕೋತೀಯಾ?, ಅವರಿಗೇನಾದ್ರು ಆಯ್ತು ಅಂತ ನಾನೇನಾದ್ರೂ ಹೇಳಿದ್ನ?".

" ಮತ್ತೆ ಏನು ವಿಷಯ ಸರಿಯಾಗಿ ಹೇಳು", ಸೀನನ ಕುತೂಹಲ ಹೆಚ್ಚಾಗುತ್ತಿತ್ತು.

" ನಮ್ಮ ಭಾಗತ್ತೆ ಶೇಷಮಾವನ್ನ ಮದ್ವೆ ಆಗಕ್ಕೆ ಮುಂಚೆ ಒಂದು ಗಂಡು ಗೊತ್ತಾಗಿತ್ತಂತೆ, ಆ ಮನುಷ್ಯ ಇದೇ ಊರಲ್ಲಿ ಮೇಷ್ಟ್ರಾಗಿದ್ರಂತೆ. ಅವರ ಮನೆ ಇದ್ದಿದ್ದು ಪೇಟೆನಲ್ಲಿ. ಸೈಕಲ್ ನಲ್ಲಿ ಹೋಗಿ ಬಂದು ಮಾಡೋರು. ಭಾಗತ್ತೆ ಜೊತೆ ಮದ್ವೆ ಗೊತ್ತಾಗಿ, ಮದುವೆಗೆ ಇನ್ನೊಂದು ಹದಿನೈದು ದಿನ ಇರೋವಾಗ ಆಗಿದ್ದು ಇದು. ಅವತ್ತು ಸೈಕಲ್ ಕೆಟ್ಟೋಗಿತ್ತಂತೆ. ಕೆಲಸ ಬೇರೆ ಜಾಸ್ತಿ ಇದ್ದು ಸ್ಕೂಲ್ ಮುಗಿಸಿ ಹೊರಡೋ ಹೊತ್ಗೆ, ಪೇಟೆಗೆ ಹೋಗೋ ಕಡೇ ಬಸ್ಸು ಕೂಡ ಹೊರಟು ಹೋಗಿತ್ತಂತೆ.

ಮುಂದಿನ ಪುಟ ನೋಡಿ ...

ಸರಿ ಇನ್ನೇನು ಮಾಡೋದು ಅಂತ ನಡ್ಕೊಂಡೇ ಹೊರಟಿದ್ದಾರೆ. ಕೆರೆ ಅರ್ಧ ದೂರ ದಾಟಿ ಈ ಮರದ ಹತ್ತಿರ ಬರುತ್ತಿದ್ದ ಹಾಗೇ ಹಿಂದೆ ಝಲ್ ಝಲ್ ಎಂದು ಗೆಜ್ಜೆ ಸದ್ದು ಕೇಳಿಸಿತಂತೆ. ಏನೋ ಯೋಚನೆಯಲ್ಲಿ ನಡೆಯುತ್ತಿದ್ದ ಅವರು ಯಾರೋ ತೋಟದಲ್ಲಿ ಕೆಲಸ ಮುಗಿಸಿ ಮನೆಗೆ ಹೋಗುತ್ತಿರುವ ಹೆಂಗಸಿರಬಹುದೆಂದು ಅತ್ತ ಕಡೆ ಗಮನ ಕೊಟ್ಟಿಲ್ಲ. ಆದರೆ ಗೆಜ್ಜೆಯ ಸದ್ದು ತೀರ ಹತ್ತಿರದಲ್ಲಿಯೇ ಕೇಳಿಬರತೊಡಗಿದಾಗ ಕುತೂಹಲದಿಂದ ಹಿಂದಕ್ಕೆ ತಿರುಗಿದ್ದಾರೆ. ಯಾರೋ ಹೆಂಗಸು ಸರಸರನೆ ನಡೆಯುತ್ತಾ ಇವರನ್ನು ದಾಟಿ ಹೋದಂತಾಗಿದೆ. ಮೈಗೆ ಬಿಸಿಯಾದ ಗಾಳಿ ತಾಕಿತೆಂದು ಕೊಂಡರೆ ಆ ಹೆಂಗಸು ಉಟ್ಟಿದ್ದ ಸೀರೆಯ ಸೆರಗು, ಇವರ ಒಂದು ಪಕ್ಕವನ್ನು ಸವರಿಕೊಂಡು ಹೋಗಿದೆ. ಮಿರಮಿರ ಮಿನುಗುವ ಜರತಾರಿ ಸೀರೆಯುಟ್ಟು, ಮುಡಿಯ ತುಂಬ ಘಮ್ಮೆನ್ನುವ ಮಲ್ಲಿಗೆ ಮುಡಿದಿದ್ದ ಆ ಹೆಣ್ಣು ಫಲ್ ಫಲ್ ಸದ್ದುಮಾಡುತ್ತಾ ಇವರನ್ನು ದಾಟಿಹೋದಳಂತೆ".

ಪ್ರಕಾಶಿಯ ಮಾತನ್ನು ಕೇಳುತ್ತಾ ಎಲ್ಲರೂ ತೂಬಿನ ಕಟ್ಟೆಯ ಮೇಲೆ ಕುಳಿತು ಬಿಟ್ಟಿದ್ದೆವು.

‘‘ಕಬ್ಬು ತಿಂದದ್ದು ಕೈಯೆಲ್ಲಾ ಅಂಟು, ನಡೀರೊ ಕಾಲ್ವೇಲಿ ಕೈ ತೊಳಕೊಂಡು ಬರೋಣ". ವೆಂಕಟೇಶನ ಮಾತಿಗೆ ಎಲ್ಲರೂ ಸರಿ ಎನ್ನುತ್ತಾ ಕಾಲುವೆಗೆ ಇಳಿದೆವು.

ಮತ್ತೆ ಮೇಲೆ ಬರುತ್ತಿದ್ದಂತೆಯೇ ಸೀನ " ಆಮೇಲೇನಾಯ್ತೋ ಪ್ರಕಾಶಿ" ಎಂದ.

"ಆ ಹೆಣ್ಣು ಯಾರು ನೋಡಣಾಂದ್ರೆ ಇವರಿಗೆ ಮುಖಾನೂ ಕಾಣ್ಸಿಲ್ಲ, ಒಳ್ಳೆ ಬುರ್ಖಾ ತರ ಇವರ ಪಕ್ಕದಲ್ಲೆ ಸುಂಯ್..... ಅಂತ ಹೋಗಿದ್ದಾಳೆ. ಮನುಷ್ಯರು ಯಾರೂ ಅಷ್ಟು ಜೋರಾಗಿ ನಡ್ಯಕ್ಕೆ ಸಾಧ್ಯಾನೆ ಇಲ್ಲ ಬಿಡು. ಆಮೇಲೆ ಇವರಿಗೆ ಮೈಮೇಲೆ ಜ್ಞಾನಾನೆ ಇಲ್ದೆ ಅದು ಹೇಗೋ ಮನೆಗೆ ಹೋಗಿ ಸೇರ್ಕೊಂಡಿದ್ದಾರೆ. ಮನೆಯೋರೆಲ್ಲ ಏನಾಯ್ತು ಅಂತ ಕೇಳಿದ್ದಕ್ಕೆ, ಮಾತೇ ಇಲ್ಲ., ಆ ಹೆಣ್ಣಿನ ಸೀರೆ ಸೆರಗು ಸೋಕಿದ ಜಾಗ ಅಷ್ಟಗಲಕ್ಕೂ ಬರೆ ಇಟ್ಟಂತೆ ಕೆಂಪಗಾಗಿತ್ತಂತೆ. ಕೂಡಲೇ ಚಳಿ ಜ್ವರ ಬಂದು ಮಲಗಿದವರು, ‘‘ಮೋಹಿನಿ, ಫಲ್ ಫಲ್, ಮಲ್ಲಿಗೆ ಘಮಘಮ’’ ಎಂದೆಲ್ಲಾ ಕನವರಿಸಿಕೊಂಡು, ಹಾಸಿಗೆ ಹಿಡಿದೇ ಬಿಟ್ಟರಂತೆ".

ಪ್ರಕಾಶಿ ಮಾತು ನಿಲ್ಲಿಸಿದ.

" ಆಮೇಲೆ’’ ಸೀನನಿಗೆ ಕುತೂಹಲ ತಡೆಯಲಾಗುತ್ತಿರಲಿಲ್ಲ.

‘‘ಆಮೇಲೆ ಅವರಿಗೆ ಹಾಗೆ ಆಗಿದ್ದರಿಂದ, ಭಾಗತ್ತೆ ತಂದೆ ಆ ಗಂಡು ಬೇಡ ಅಂತ ಹೇಳಿ ಬೇರೆ ಗಂಡನ್ನು ಹುಡುಕಿ ಮದುವೆ ಮಾಡಿದರಂತೆ. ಆ ಮನುಷ್ಯಂಗೆ ಆಮೇಲೆ ಏನಾಯ್ತು ಅನ್ನೋದು ಗೊತ್ತಿಲ್ಲ’’.

ಆ ವೇಳೆಗೆ ಸಂಪೂರ್ಣವಾಗಿ ಕತ್ತಲಾದ್ದರಿಂದ ಮನೆಯಕಡೆ ಹಿಂದಿರುಗಿದೆವು.

****

ಮತ್ತೆ ಮಾರನೆಯ ದಿನ ಸಂಜೆ ಕೆರೆ ಏರಿಯ ಮೇಲೆ ನಮ್ಮ ವಾಕಿಂಗ್ ನಡೆದಿತ್ತು. ಇಂದು ಪೇಟೆಯಿಂದ ಬಂದ ರಾಮಣ್ಣನ ಸೇರ್ಪಡೆಯಾಗಿತ್ತು ನಮ್ಮ ಗುಂಪಿನಲ್ಲಿ ಅವನೇ ಹಿರಿಯ.

ಸ್ವಲ್ಪ ಹಿರಿಯರಾಗಿದ್ದ ಹುಡುಗರಿಗೆಲ್ಲಾ ಅದೇನೋ ದೆವ್ವತ್ತಿಮರದ ವಿಷಯ ಮಾತನಾಡಬೇಕೆಂಬ ತವಕ. ಬೇರೆಯವರಿಗಿಂತ ತನಗೇ ಹೆಚ್ಚು ತಿಳಿದಿದೆಯೆಂದು ತೋರಿಸಿಕೊಳ್ಳಲು ಹೆಮ್ಮೆ. ರಾಮಣ್ಣ ಅದರ ಕಥೆಗಳನ್ನು ಹೇಳುವುದರಲ್ಲಿ ಪ್ರಕಾಶಿಗಿಂತಲೂ ಒಂದು ಕೈ ಮೇಲೆ.

ಆ ಸಂಜೆ ಕೂಡ ಯಥಾಪ್ರಕಾರ ಕಬ್ಬನ್ನು ಸವಿಯುತ್ತಾ ನಡೆದಿದ್ದೆವು.

"ಲೋ ಸೀನ, ಈ ಮರದಲ್ಲಿ ಕೊಳ್ಳಿದೆವ್ವ ಇದೆ ಗೊತ್ತೇನೋ ನಿಂಗೆ", ರಾಮಣ್ಣ ಆರಂಭಿಸಿದ್ದ.

"ಆಂ ಕೊಳ್ಳಿದೆವ್ವಾನಾ?, ಮೋಹಿನಿ ಇದೆ ಅಂದಿದ್ದ ಪ್ರಕಾಶಿ ನಿನ್ನೆ". ಸೀನ ಮೆಟ್ಟಿಬಿದ್ದಿದ್ದ.

"ಈ ಮರಾನಾ ನೀನು, ಅಂತಿಂತದ್ದು ಅಂದ್ಕೋಬೇಡ. ಅದು ಯಾವ ತರ ದೆವ್ವಾನ ಬೇಕಾದ್ರು ಕಳಿಸುತ್ತೆ. ಮೋಹಿನಿ ಅದ್ರೂ ಇರ್ಲಿ, ಕೊಳ್ಳಿದೆವ್ವಾನಾದ್ರೂ ಆಗ್ಲಿ ಎಲ್ಲಾ ಇದೆ ಇಲ್ಲಿ. ಒಂದ್ಸಲ ಬಾವಿಮನೆ ಕೆಂಚಪ್ಪ ಇನ್ನೂ ಬೆಳಕು ಹರಿಯಕ್ಕೆ ಮುಂಚೇನೆ ಕೆರೆ ಆಚೆಗಿರೋ ಹಳ್ಳಿ ಒಂದಕ್ಕೆ ನಡ್ಕೊಂಡು ಹೋಗ್ತಿದ್ನಂತೆ. ಆವಾಗ ಅಲ್ನೋಡು ಆ ಬಾಯಿ ಬಿಟ್ಕೊಂಡಿರೋ ತರದ ಕೊಂಬೆ ಇದೆಯಲ್ಲ....’’

ಎಲ್ಲರೂ ತಲೆ ಮೇಲೆತ್ತಿ ಬಾಯ್ಬಾಯಿ ಬಿಟ್ಕೊಂಡು ಅವನು ಹೇಳ್ತಿದ್ದ ಕೊಂಬೇನ ಹುಡುಕಿದೆವು.

"ಆ ಬಾಯಿಂದ ಮೂರು ಕೊಳ್ಳಿದೆವ್ವಗಳು ಈಚೆ ಬಂದು, ಒಂದೊಂದೂನೂ ಒಂದೊಂದು ದಿಕ್ಕಿನಲ್ಲಿ ಹೋದವಂತೆ. ಮಾರನೆಯ ದಿನ ನೋಡಿದರೆ ಒಂದು ಬಣವೆ, ಒಂದು ಕೊಟ್ಟಿಗೆ, ಒಂದು ಮನೆ ಹೀಗೆ ಮೂರೂ ಕಡೆ ಬೆಂಕಿ. ಕೆಂಚಪ್ಪ ತಾನು ಕಂಡದ್ದನ್ನು ಹೇಳಿದ ಮೇಲೆ ಎಲಾರ್ಗೂ ಗೊತ್ತಾಯ್ತು ಇದು ದೆವ್ವತ್ತಿ ಮರದ್ದೆ ಕೆಲ್ಸಾಂತ".

ಎಲ್ಲರೂ ತನ್ನ ಮಾತ್ನಲ್ಲೇ ಮುಳುಗಿ ಹೋಗಿದ್ದಾರೆ ಅಂತ ರಾಮಣ್ಣಂಗೆ ಗೊತ್ತಾಯ್ತು. ಯಾಕೇಂದ್ರೆ ಇನ್ನೂ ಏನಾದ್ರು ಹೇಳ್ತಾನೇನೋ ಅಂತ ಎಲ್ರೂ ಕಾಯ್ತಿದ್ರು.

ಮುಂದಿನ ಪುಟ ನೋಡಿ ...

"ಮತ್ತಿನ್ನೊಂದು ಸಲ ಏನಾಯ್ತುಂತೆ ಅಂದ್ರೆ, ಅದೆ ಆ ಚಿನ್ನಬೆಳ್ಳಿ ಬೆಟ್ಟಪ್ಪಇದ್ದಾನಲ್ಲ, ಪೇಟೆಗೆ ಹೋಗಿದ್ದೋನು ರಾತ್ರಿ ಸೈಕಲ್ ಮೇಲೆ ವಾಪಸ್ ಬರ್ತಿದ್ದ. ಹೆಂಡ್ತಿ ಬಸುರಿ ಅಂತ ಇರೋಬರೋ ಸಿಹಿ ತಿಂಡಿಗಳನ್ನೆಲ್ಲಾ ಕಟ್ಟುಸ್ಕೊಂಡು ತರ್ತಿದ್ದ. ಈ ಅತ್ತಿ ಮರದ ಹತ್ರ ಬಂದಾಗ ಯಾರೋ ಹಿಂದೆಯಿಂದ ಸೈಕಲ್ ನ ಹಿಡಿದು ಎಳೆದ ಹಾಗಾಯ್ತು.

"ಯಾರೂ ಅಂತ ಹಿಂದೆ ತಿರುಗಿನೋಡಿದ್, ಕತ್ಲಲ್ಲಿ ಯಾರೋ ಹುಡುಗ ನಿಂತಿದ್ದ ಹಾಗಿತ್ತು.

"ಎಲ್ಲಿಗೆ ಹೋಗ್ಬೇಕಪ್ಪ" ಅಂತ ಕೇಳಿದ.

"ಇಲ್ಲೇ ಸ್ವಲ್ಪ ದೂರ" ಅಂದ ಆ ಹುಡುಗ.

ಸರಿ ಹತ್ತಿಸಿಕೊಂಡು ಸ್ವಲ್ಪ ಮುಂದೆ ಬಂದ ಮೇಲೆ ಬೆಟ್ಟಪ್ಪನಿಗೆ ಯಾಕೋ ಅನುಮಾನ ಬಂತು. ಮಾತಿಲ್ಲ ಕತೆಯಿಲ್ಲ, ಸೈಕಲ್ ಮೇಲೆ ಹಿಂದೆ ಯಾರೋ ಕೂತಿದ್ದಾರೆ ಅನ್ನೋ ತರ ಭಾರಾನೂ ಇಲ್ಲ. ಇದೇನಿದು ಅಂತ ಹಿಂದೆ ತಿರುಗಿ ನೋಡಿದ್ರೆ ಯಾರೂ ಇಲ್ವೇ ಇಲ್ಲ. ಯಾಕೋ ಗಾಬ್ರಿ ಆಯ್ತು, ಕೆಳಗಿಳಿದು ಹಿಂದಕ್ಕೆ ನೋಡಿದ್ರೆ, ಹುಡುಗಾನೂ ಇಲ್ಲ ತಿಂಡಿ ಚೀಲಾನೂ ಇಲ್ಲ. ಆ ಬಿಳೀ ಚೀಲ ದೆವ್ವತ್ತಿ ಮರದ ಕೊಂಬೇಲಿ ನೇತಾಡ್ತಿತ್ತಂತೆ.

ಎದ್ನೋ ಬಿದ್ನೋ ಅಂತ ಸೈಕಲ್ ಹತ್ಕೊಂಡು ಮನೆಗೆ ಬಂದು ಜ್ವರ ಬಂದು ಮಲಗ್ದೋನು, ಮತ್ತೆ ಮಾಮೂಲಿನ್ ತರ ಆಗಕ್ಕೆ ವರ್ಷಾನೇ ಬೇಕಾಯ್ತಂತೆ".

ಈ ಕಥೆ ನಂಗೆ ಹೊಸದು, ಇನ್ನೂ ಎಷ್ಟು ಈ ತರ ಆಟಗಳನ್ನ ಆಡಿದೆಯೋ ಈ ದೆವ್ವ ಅಂದ್ಕೊಂಡೆ.

ಪ್ರಕಾಶಿ ಹೇಳಿದ "ಅದಕ್ಕೇನಮ್ಮಾ, ಸಂಜೆ ಆದ್ಮೇಲೆ ಹೊರಗಡೆ ಹೋಗೋವಾಗ ಸಿಹಿತಿಂಡಿ ಎತ್ಕೊಂಡು ಹೋಗಬಾರ್ದು ಅನ್ನೋದು. ಅಕಸ್ಮಾತ್ ತೊಗೊಂಡು ಹೋದ್ರೂನು ಅದರ ಮೇಲೆ ಮೆಣಸಿನಕಾಯಿ ಇಟ್ಕೊಂಡು ಹೋಗ್ಬೇಕಂತೆ".

ಈ ವಿಷಯಾನೂ ಗೊತ್ತಿರಲಿಲ್ಲ, ಹೊಸದೊಂದು ತಿಳ್ಕೊಂಡ ಹಾಗಾಯ್ತು. ಸಧ್ಯ ಅದಕ್ಕೆ ಪರಿಹಾರಾನೂ ಗೊತ್ತಾಯ್ತಲ್ಲ. ಇನ್ಮುಂದೆ ಒಂದು ಜೋಬಲ್ಲಿ ಪಾಕಾನ್ ಪೊಪ್ಪು ಇಟ್ಕೊಂಡ್ರೆ ಇನ್ನೊಂದು ಜೋಬಲ್ಲಿ ಮೆಣಸಿನಕಾಯಿನೂ ಇಟ್ಕೋಬೇಕು ಅಂತ ತೀರ್ಮಾನ ಮಾಡಿದೆ.

ಈ ಕಥೆಗಳನ್ನೆಲ್ಲಾ ಕೇಳಿ ರಾತ್ರಿ ಹೊತ್ತು ಒಂಟಿಯಾಗಿ ಮನೆಯಿಂದಾಚೆ ಬರಲು ಹೆದರಿಕೆಯಾಗುತ್ತಿತ್ತು. ಊಟವಾದ ನಂತರ ತಟ್ಟೆ ತೊಳೆಯಲು ಅಂಗಳದಲ್ಲಿದ್ದ ಬಚ್ಚಲಿಗೆ ಹೋಗಬೇಕಿತ್ತು. ಯಾರೂ ಇಲ್ಲದಿದ್ದರೆ ದಬಕ್ಕೆಂದು ತಟ್ಟೆಯನ್ನು ತೊಟ್ಟಿಯ ನೀರಿನಲ್ಲಿ ಅದ್ದಿ ಓಡಿ ಬಂದುಬಿಡುತ್ತಿದ್ದೆ. ಮನೆಯ ಸುತ್ತಮುತ್ತಲೂ ಮತ್ತೊಂದು ಅತ್ತಿ ಮರವೂ ಸೇರಿದಂತೆ ಸಾಕಷ್ಟು ದೊಡ್ಡಮರಗಳಿದ್ದು, ರಾತ್ರಿಯ ಹೊತ್ತು ಕತ್ತೆತ್ತಿ ಮೇಲೆ ನೋಡುತ್ತಲೇ ಇರಲಿಲ್ಲ.

ಹೀಗೆ ದೆವ್ವತ್ತಿ ಮರದ ಭಯದ ಬೇರು ನನ್ನಲ್ಲಿ ಆಳವಾಗಿ ಇಳಿದುಬಿಟ್ಟಿತ್ತು. ...

ಮುಂದಿನ ಸಂಚಿಕೆಯಲ್ಲಿ:

ಇಲ್ಲಿಯವರೆಗೆ ದೆವ್ವತ್ತಿ ಮರದ ವಿಷಯ ತಿಳಿದುಕೊಂಡಿರಿ.

ಅಜ್ಜಿಗೆ ಮೈ ಸರಿಯಿಲ್ಲವೆಂದು ತಿಳಿದು ಊರಿಗೆ ಹೊರಟಾಗ ರಾತ್ರಿಯಾಗಿತ್ತು. ಬಳ್ಳಾಪುರದಿಂದ ಊರಿನ ಬಸ್ ಮಿಸ್ ಆಯ್ತು. ರಾತ್ರಿ ಒಬ್ಬನೇ ನಡೆದುಕೊಂಡು ಹೋದಾಗ ಏನಾಯಿತು ಎಂಬುದನ್ನು ಮುಂದಿನ ಕಂತಿನಲ್ಲಿ ಓದಿ.

- ಮನೆಯಲ್ಲಿನ ದಿನನಿತ್ಯದ ಧೂಳಿನಲ್ಲಿ ಪ್ರತಿಶತ ೭೦% ರಷ್ಟು ನಮ್ಮದೇ ಚರ್ಮದ ಕೋಶಗಳಿರುತ್ತವೆ (ಉದುರುವ ಹಳೆಯ/ಸತ್ತ ಚರ್ಮ ಕೋಶಗಳು)

- ನಮ್ಮ ದೇಹದಲ್ಲಿರುವ ಕೆಂಪು ರಕ್ತಕಣದ ಆಯಸ್ಸು ಸುಮಾರು ೧೨೦ ದಿನಗಳು
- ಶೇಖಡ ೧% ಕ್ಕಿಂತ ಕಡಿಮೆಯಿರುವ ರಕ್ತದ ಗುಂಪು ಏಬಿ ನೆಗೆಟಿವ್
- ದೇಹದ ಅತಿ ಚಿಕ್ಕ ಮೂಳೆ ಕಿವಿಯಲ್ಲಿದೆ
- ಒಂದರ್ಧ ಘಂಟೆ ಮಲಗಿ ವಿಶ್ರಾಂತಿ ತೆಗೆದುಕೊಳ್ಳಿ ಎನ್ನುವುದನ್ನು ಕೇಳಿದ್ದೀರಲ್ಲವೇ. ಅದಕ್ಕೆ ಈ ವಿಷಯ ನಂಟು ಹಾಕಬಹುದು - ನಾವು ದಿನನಿತ್ಯ ಕಣ್ಣು ಮಿಟಿಕಿಸುವುದನ್ನು ಕೂಡಿಟ್ಟರೆ, ಅದು ಸುಮಾರು ಅರ್ಧ ಘಂಟೆಯಾಗುತ್ತದೆ.

- ಕಾಂಗರೂ ಹಾಗು ಎಮ್ಯು ಪಕ್ಷಿಯು ಹಿಂದಕ್ಕೆ ನಡೆಯಲಾರದು. ಈ ಒಂದು ಗುಣದಿಂದ, ಆಸ್ಟ್ರೇಲಿಯಾ ದೇಶವು ಸದಾ ಮುನ್ನಡೆಯುತ್ತಿರಲೆಂದು ಅವುಗಳನ್ನು ರಾಷ್ಟ್ರಲಾಂಛನದಲ್ಲಿ ಸೇರಿಸಲಾಗಿದೆ

- ಸಾಮಾನ್ಯವಾದ ಒಂದು ಫುಲ್ ಸ್ಕೇಪ್ ನೋಟ್ಬುಕ್ ಹಾಳೆಯನ್ನು ೭ ಕ್ಕಿಂತ ಹೆಚ್ಚು ಸಲ ಬರಿಗೈಯಿಂದ ಮಡಿಸಲು ಸಾಧ್ಯವಾಗುವುದಿಲ್ಲ. ನಂಬಿಕೆಯಿಲ್ಲವೇ! ನೀವೇ ಪ್ರಯತ್ನಿಸಿ ನೋಡಿ

ಜಾಣ ಕರ್ನಾಟಕ – ಉತ್ತರ

೧. ಅಂಬಾ ವಿಲಾಸ, ಇಂಡೋ ಸಾರ್ಸನಿಕ್ ಶೈಲಿ(ಹಿಂದು, ಮುಸ್ಲಿಮ್ ಮತ್ತು ಗೋಥಿಕ್ ಸಂಗಮ), ಸರ್ ಹೆನ್ರಿ ಐರ್ವಿನ್.
೨. ೧೯೧೨ ರಲ್ಲಿ ನಿರ್ಮಾಣವಾಯಿತು, ತಗುಲಿದ ವೆಚ್ಚ ೪೨ ಲಕ್ಷ ರೂಪಾಯಿಗಳು. (ಮುಂಚೆ ಇದ್ದ ಮರದ ಅರಮನೆ ೧೮೯೭ ರಲ್ಲಿ ರಾಜಕುಮಾರಿ ಜಯಲಕ್ಷ್ಮಿಅಮ್ಮಣ್ಣಿ ವಿವಾಹದ ಸಮಯದಲ್ಲಿ ಬೆಂಕಿ ಬಿದ್ದು ನಾಶವಾಗಿತ್ತು)

ಅಲ್ಲಲ್ಲಿ ಏನೇನು

ನಿಮ್ಮ ಕಾರ್ಯಕ್ರಮವಿದ್ದರೆ ತಿಳಿಸಿ - horanadachilume@gmail.com

ಉದ್ಧವ ಗೀತಾ - ಭಾಗವತ

Sun, June 26, 3pm – 5pm

Toongabbie Community Centre Corner of Targo and Toongabbie Road, Toongabbie, NSW

ಹೆಚ್ಚಿನ ಮಾಹಿತಿಗಾಗಿ ನೋಡಿ

Email to register: m_vasudevacharya@yahoo.com.au.
Contact: Archana 0438 200 090

ರಥೋತ್ಸವ

೦೯/೦೭/೨೦೧೬ ಬೆಳಿಗ್ಗೆ ೧೦:೦೦ ಕ್ಕೆ

Bathurst St Car Park, 113 Northumberland St. Liverpool, Street Parade

ಹೆಚ್ಚಿನ ಮಾಹಿತಿಗೆ

96010290

ಈ ಸಂಚಿಕೆಯನ್ನು ನಿಮಗಾಗಿ ತಂದವರು – ಸುಗಮ ಕನ್ನಡ ಕೂಟ – ಸಿಡ್ನಿ, ಆಸ್ಟ್ರೇಲಿಯಾ
ವಿನ್ಯಾಸ ಮತ್ತು ಮುಖ್ಯ ಸಂಪಾದಕರು – ಬದರಿ ತ್ಯಾಮಗೊಂಡ್ಲು ~ ಸಂಕಲನ – ವೀಣಾ ಸುದರ್ಶನ್, ರಾಜಲಕ್ಷ್ಮಿ ನಾರಾಯಣ
ಸಲಹಾ ಸಮಿತಿ –ಕನಕಾಪುರ ನಾರಾಯಣ, ನಾಗೇಂದ್ರ ಅನಂತಮೂರ್ತಿ
ಸೂಚನೆ: ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಎಲ್ಲ ವಿಷಯಗಳು ವಿವಿಧ ಲೇಖಕರ ಅನಿಸಿಕೆಗಳು. ಯಾವುದೇ ಅನಾನುಕೂಲವಾದಲ್ಲಿ "ಸುಗಮ ಕನ್ನಡ ಕೂಟ" ಅಥವಾ ಅದಕ್ಕೆ ಸಂಬಂಧಿಸಿದ ವ್ಯಕ್ತಿಗಳು ಜವಾಬ್ದಾರರಲ್ಲ. ಈ ಸಂಚಿಕೆಯಲ್ಲಿ ಪ್ರಕಟವಾದ ಎಲ್ಲ ಸುದ್ದಿ ಮಾಹಿತಿ, ಚಿತ್ರಗಳ ಹಕ್ಕುಗಳು ಸ್ಪಷ್ಟವಾಗಿ ಉಲ್ಲೇಖಿಸಿರದಿದ್ದರೆ ಅದು ಸುಗಮ ಕನ್ನಡ ಕೂಟಕ್ಕೆ ಸೇರಿದೆ.
ಸಂಚಿಕೆಯಲ್ಲಿ ಬಳಸಿದ ಹಲವು ಚಿತ್ರಗಳು ಅಂತರ್ಜಾಲದಿಂದ ಪಡೆದದ್ದು. ಅದರ ಎಲ್ಲ ಹಕ್ಕೂ ಅದರದರ ಕರ್ತೃಗಳಿಗೆ ಸೇರಿದ್ದು.